# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಡಿಸೆಂಬರ್ 22, 2021

ಸಂಪುಟ : 48 ಸಂಚಿಕೆ : 221 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




# ಪಂಚಮಸಾಲಿ 2ಎ ಮೀಸಲಾತಿ ವರದಿ ಸಲ್ಲಿಸಲು ಕಾಲಮಿತಿ ಹೇಳಲಾಗದು

**ಮೀಸಲಾತಿ ಕೊಡುವುದು ಸರ್ಕಾರಕ್ಕೆ ಬಿಟ್ಟ ವಿಷಯ**
**- ಜಯಪ್ರಕಾಶ್ ಹೆಗಡೆ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ**

ಹರಿಹರ, ಡಿ.21- ರಾಜ್ಯದಾದ್ಯಂತ ಪಂಚಮಸಾಲಿ ಸಮಾಜದ ಜನರು ಹೆಚ್ಚಾಗಿ ಇರುವ ಗ್ರಾಮಗಳಿಗೆ ಭೇಟಿ ಮಾಡಿ ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ಸಮಗ್ರವಾಗಿ ತಿಳಿದು ನಂತರದಲ್ಲಿ ಸರ್ಕಾರಕ್ಕೆ ವರದಿಯನ್ನು ನೀಡಲಾಗುತ್ತದೆ. ತದನಂತರ ಮೀಸಲಾತಿ ಕೊಡುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರವಾಗಿದೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ತಿಳಿಸಿದ್ದಾರೆ.

ತಾಲ್ಲೂಕಿನ ಬನ್ನಿಕೋಡು ಗ್ರಾಮದಲ್ಲಿ ಸುಮಾರು ಐವತ್ತು ಕ್ಕೂ ಹೆಚ್ಚು

> **ಸರ್ಕಾರಕ್ಕೆ ಇಂದಿನ ಆಯೋಗವು ಪಂಚಮಸಾಲಿ ಸಮಾಜದ ಒಳಿತಿಗಾಗಿ ನ್ಯಾಯಬದ್ಧ ಉತ್ತಮ ವರದಿಯನ್ನು ನೀಡುವ ಮೂಲಕ ಪಂಚಮಸಾಲಿ ಸಮಾಜದ ಜನರಿಗೆ ನ್ಯಾಯ ಒದಗಿಸಬೇಕು.**
> **- ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕ**

ಪಂಚಮಸಾಲಿ ಸಮಾಜದ ಮನೆಗಳಿಗೆ ಭೇಟಿ ಮಾಡಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಯ ವಿಚಾರಗಳನ್ನು ಸಂಗ್ರಹಿಸಿ ನಂತರದಲ್ಲಿ ಅವರು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ಮಾಹಿತಿ ಸಂಗ್ರಹಣೆಗೆ ಬಹಳ ಸಮಯ ಬೇಕಾಗುತ್ತದೆ ಮತ್ತು ನಾನು ಸಂಗ್ರಹಿಸಿರುವ

(2ನೇ ಪುಟಕ್ಕೆ)

# ಹೊಸ ವರ್ಷಾಚರಣೆಗೆ ನಿರ್ಬಂಧ

## ಡಿ.30 ರಿಂದ ಜ.2ರ ವರೆಗೆ ಬಹಿರಂಗ ಸಂಭ್ರಮಾಚರಣೆ ನಿಷೇಧ

ಬೆಳಗಾವಿ, ಡಿ. 21- ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹೊಸ ವರ್ಷಾಚರಣೆಗೆ ಕೆಲವು ನಿರ್ಬಂಧಗಳನ್ನು ರಾಜ್ಯ ಸರ್ಕಾರ ಹೇರಿದೆ.

ಕೋವಿಡ್ ರೂಪಾಂತರ ತಳಿ ಓಮಿಕ್ರಾನ್ ವೈರಾಣು ರಾಷ್ಟ್ರ ಮತ್ತು ರಾಜ್ಯದಲ್ಲಿ ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಸಲುವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಸಚಿವರು, ಅಧಿಕಾರಿಗಳು ಮತ್ತು ತಜ್ಞರೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಈ ತೀರ್ಮಾನ ಕೈಗೊಂಡಿದ್ದಾರೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಮನರಂಜನಾ ಕಾರ್ಯ ಕ್ರಮ ಹಾಗೂ ಬಹಿರಂಗ ಸಂಭ್ರಮಾಚರಣೆಗಳನ್ನು ಹೊಸ ವರ್ಷದ ಸಂದರ್ಭದಲ್ಲಿ ನಿಷೇಧಿಸಲಾಗಿದೆ ಎಂದಿದ್ದಾರೆ.

ಡಿಸೆಂಬರ್ 30 ರಿಂದ ಜನವರಿ 2 ರವರೆಗೂ ರಾಜ್ಯಾದ್ಯಂತ ನಿರ್ಬಂಧ ಜಾರಿಯಲ್ಲಿರಲಿದೆ. ಈ ಅವಧಿಯಲ್ಲಿ ಬಹಿರಂಗ ಸಂಭ್ರಮಾಚರಣೆಗಳಿಗೆ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಾರ್ ಮತ್ತು ರೆಸ್ಟೋರೆಂಟ್, ರೆಸಾರ್ಟ್ ಮತ್ತಿತರೆ

> **ಬಾರ್ ಮತ್ತು ರೆಸ್ಟೋರೆಂಟ್, ರೆಸಾರ್ಟ್ ಮತ್ತಿತರೆ ಸ್ಥಳಗಳಲ್ಲಿ ಒಟ್ಟು ಸಾಮರ್ಥ್ಯದ ಶೇ. 50 ರಷ್ಟು ಮಂದಿಗೆ ಪ್ರವೇಶ**
>
> **ಯಾವುದೇ ರೀತಿ ಮನರಂಜನೆ, ಸಂಭ್ರಮಾಚರಣೆ ನಿಷಿದ್ಧ**

ಸ್ಥಳಗಳಲ್ಲಿ ಅಲ್ಲಿನ ಒಟ್ಟು ಸಾಮರ್ಥ್ಯದ ಶೇ. 50 ರಷ್ಟು ಮಂದಿಗೆ ಮಾತ್ರ ಪ್ರವೇಶ ನೀಡಬೇಕು. ಆದರೆ, ಅಲ್ಲಿ ಯಾವುದೇ ರೀತಿಯ ಮನರಂಜನೆ ಮತ್ತು ಸಂಭ್ರಮಾಚ ರಣೆ ನಡೆಸುವಂತಿಲ್ಲ. ಅಲ್ಲಿನ ಎಲ್ಲಾ ಸಿಬ್ಬಂದಿ 2 ಡೋಸ್ ಲಸಿಕೆ ಪಡೆಯುವುದು ಕಡ್ಡಾಯ ಎಂದವರು ಹೇಳಿದ್ದಾರೆ.

ಬೆಂಗಳೂರಿನ ಬ್ರಿಗೇಡ್ ಹಾಗೂ ಎಂ.ಜಿ. ರಸ್ತೆಯಲ್ಲಿ ಈ ಹಿಂದೆ ನಡೆಯುತ್ತಿದ್ದ ಸಂಭ್ರಮದ ಹೊಸ ವರ್ಷಾಚರಣೆ ಇರುವುದಿಲ್ಲ. ಇದು ಕೇವಲ ಇಲ್ಲಿಗೆ ಮಾತ್ರವಲ್ಲ. ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆ.

ಕ್ರಿಸ್‌ಮಸ್ ಆಚರಣೆಗೆ ಯಾವುದೇ ನಿರ್ಬಂಧವಿಲ್ಲ. ಚರ್ಚ್‌ಗಳಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸಿಕೊಂಡೇ ಪ್ರಾರ್ಥನೆ ಸಲ್ಲಿಸುವ ವ್ಯವಸ್ಥೆ ಈಗಾಗಲೇ ಇದೆ. ಅದನ್ನೇ ಮುಂದುವರೆಸಬೇಕು.

ಕೋವಿಡ್ ಹಾಗೂ ಓಮಿಕ್ರಾನ್ ಬೆಳವಣಿಗೆ ಗಮನಿಸಿ, ಪರಿಣಿತರ ಶಿಫಾರಸ್ಸಿನಂತೆ ಹೊಸ ವರ್ಷದ ಸಂದರ್ಭದಲ್ಲಿ ಈ ನಿರ್ಧಾರ ಮಾಡಲಾಗಿದೆ. ಕ್ರಿಸ್‌ಮಸ್ ನಲ್ಲೂ ಬಹಿರಂಗ ಸಮಾರಂಭಗಳಿಗೆ ಅವಕಾಶವಿಲ್ಲ.

ರಾಜ್ಯದಲ್ಲಿ ಕೋವಿಡ್ ನಿಯಂತ್ರಣದಲ್ಲಿದ್ದರೂ, ಹೊಸ ತಳಿ ಓಮಿಕ್ರಾನ್ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮನರಂಜನೆ ಮತ್ತು ಸಮಾರಂಭಗಳಿಗೆ ಅವಕಾಶ ನೀಡಬಾರದು. ಜನರು ಗುಂಪು ಸೇರದಂತೆ ನೋಡಿಕೊಳ್ಳಬೇಕು ಹಾಗೂ ಕೋವಿಡ್ ನಿಯಮಾವಳಿ ಗಳನ್ನು ಪಾಲಿಸುವಂತಹ ಬಾರ್, ಕ್ಲಬ್, ಹೋಟೆಲ್ ಮತ್ತಿತರೆ ಮನರಂಜನಾ ಕೇಂದ್ರಗಳಿಗೆ ಕೆಲವು ನಿಯಮ ಗಳನ್ನು ಅಳವಡಿಸಿ, ಅವಕಾಶ ಮಾಡಿಕೊಡಬಹುದೆಂದು ತಜ್ಞರು ಸಲಹೆ ನೀಡಿದ್ದರು. ತಜ್ಞರ ಸಲಹೆ ಮೇರೆಗೆ ಇಂದು ಮಧ್ಯಾಹ್ನ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ ಯವರು ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

# ಬೆಳೆ ಹಾನಿಗೆ 1,200 ಕೋಟಿ ಹೆಚ್ಚುವರಿ ಪರಿಹಾರ: ಸಿಎಂ

ಬೆಳಗಾವಿ, ಡಿ. 20 - ಪ್ರವಾಹ ಹಾಗೂ ಅತಿವೃಷ್ಟಿಯಿಂದ ಬೆಳೆ ಹಾನಿಗೆ ಗುರಿಯಾಗಿರುವ ರೈತರಿಗೆ ಹೆಚ್ಚುವರಿ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದಾರೆ.

ನಿಯಮ 69 ಅಡಿಯಲ್ಲಿ ವಿಧಾನ ಸಭೆಯಲ್ಲಿ ನಡೆದ ಬೆಳೆ ಹಾನಿ ಕುರಿತ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಮಾತನಾಡಿದ ಬೊಮ್ಮಾಯಿ, ರಾಜ್ಯ ಸರ್ಕಾರ ಮೊದಲ ಬಾರಿಗೆ ಬೆಳೆ ಹಾನಿ ಪರಿಹಾರ ವಿತರಣೆಯಲ್ಲಿ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದೆ ಎಂದಿದ್ದಾರೆ.

ರಾಜ್ಯ ಸರ್ಕಾರ ಕೋವಿಡ್ ಮತ್ತು ಆರ್ಥಿಕ ತೊಂದರೆ ನಡುವೆಯೂ ಈ ನಿರ್ಧಾರ ಕೈಗೊಂಡಿದೆ. ನಮ್ಮ ಸರ್ಕಾರ ರೈತರ ಪರವಾಗಿದೆ ಎಂದಿರುವ ಅವರು, ಈ ಹೆಚ್ಚುವರಿ ಮೊತ್ತದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಒಟ್ಟು 1200 ಕೋಟಿ ರೂ. ಆರ್ಥಿಕ ಹೊರೆ ಬೀಳಲಿದೆ ಎಂದಿದ್ದಾರೆ. ಒಂದು

> **ರಾಜ್ಯದ ಹತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಗೀಡಾದ ರೈತರಿಗೆ ಈಗಾಗಲೇ 969 ಕೋಟಿ ರೂ. ಪರಿಹಾರ ನೀಡಲಾಗಿದೆ.**
> **ಬಸವರಾಜ ಬೊಮ್ಮಾಯಿ, ಸಿಎಂ**

ಹೆಕ್ಟೇರ್ ಒಣ ಬೇಸಾಯ ಬೆಳೆಹಾನಿಗೆ ಎನ್ ಡಿ ಆರ್ ಎಫ್ ನಿಯಮದ ಪ್ರಕಾರ ನಿಗದಿಯಾಗಿರುವ ಪರಿಹಾರದ ಮೊತ್ತ 6800 ರೂಪಾಯಿ. ಇದು ಕಡಿಮೆಯಾಗುವ ಕಾರಣ, ಸರ್ಕಾರ ತನ್ನ ಬೊಕ್ಕಸದಿಂದ ಪ್ರತಿ ಹೆಕ್ಟೇರ್‌ಗೆ 6,800 ರೂ. ನೀಡಲಿದೆ. ಒಟ್ಟಾರೆ ಹೆಕ್ಟೇರ್ ಬೆಳೆ ಹಾನಿಗೆ 13,600 ರೂ. ಪರಿಹಾರ ನೀಡಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ. ನೀರಾವರಿ ಪ್ರದೇಶದ ಒಂದು ಹೆಕ್ಟೇರ್ ಬೆಳೆ ಹಾನಿಗೆ

(2ನೇ ಪುಟಕ್ಕೆ)

# ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕೈಗಾರಿಕೆಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ

ಬೆಳಗಾವಿ, ಡಿ. 21 -ನಗರ ಪಾಲಿಕೆಗಳು ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಕಟ್ಟಡಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ದರ ನಿಗದಿ ಪಡಿಸುವ ಮಸೂದೆಗೆ ರಾಜ್ಯ ವಿಧಾನಸಭೆ ಅಂಗೀಕಾರ ನೀಡಿದೆ.

ಕರ್ನಾಟಕ ನಗರ ಪಾಲಿಕೆ ಹಾಗೂ ಇತರೆ ಕೆಲ ಕಾಯ್ದೆಗಳ ತಿದ್ದುಪಡಿ ಮಸೂದೆಯ ಮೂಲಕ ತೆರಿಗೆ ದರ ನಿಗದಿ ಪಡಿಸಲಾಗುತ್ತಿದೆ.

ಈ ಬಗ್ಗೆ ಮಾತನಾಡಿರುವ

(2ನೇ ಪುಟಕ್ಕೆ)

# ಮತಾಂತರ ತಡೆ ಮಸೂದೆ ವಿಧಾನಸಭೆಯಲ್ಲಿ ಮಂಡನೆ

ಬೆಂಗಳೂರು, ಡಿ. 21 - ಬಲವಂತವಾಗಿ ಮತಾಂತರ ಮಾಡಿಸಿದಂತವರಿಗೆ 3 ರಿಂದ 10 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಕಾಯ್ದೆ ಅನುಮೋದನೆಗಾಗಿ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿಂದು 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ ಹಕ್ಕು 2021 ತಿದ್ದುಪಡಿ ಮಸೂದೆ' ಮಂಡನೆ ಮಾಡಿತು. ಗೃಹ ಸಚಿವ ಆರಗ

(3ನೇ ಪುಟಕ್ಕೆ)

# ಬ್ರಿಟನ್‌ನಲ್ಲಿ ದುಬಾರಿ ವಿಚ್ಛೇದನ

ಲಂಡನ್, ಡಿ. 21 – ದುಬೈ ಆಡಳಿತಗಾರ ತನ್ನ ಮಾಜಿ ಪತ್ನಿ ಹಾಗೂ ಮಕ್ಕಳಿಗೆ ಸುಮಾರು 550 ದಶಲಕ್ಷ ಪೌಂಡ್ (730 ದಶಲಕ್ಷ ಡಾಲರ್) ನೀಡುವಂತೆ ಬ್ರಿಟಿಷ್ ನ್ಯಾಯಾಲಯ ಆದೇಶಿಸಿದೆ. ಇದು ಬ್ರಿಟನ್ ಇತಿಹಾಸದಲ್ಲಿ ಅತಿ ದೊಡ್ಡ ವಿಚ್ಛೇದನ ಇತ್ಯರ್ಥ ಮೊತ್ತಗಳಲ್ಲಿ ಒಂದಾಗಿದೆ.

> **ಮಾಜಿ ಪತ್ನಿಗೆ 730 ದಶಲಕ್ಷ ಡಾಲರ್ ನೀಡಲು ದುಬೈ ಆಡಳಿತಗಾರನಿಗೆ ಆದೇಶ**

ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮೊಕ್ತೌಮ್ ಅವರು ತಮ್ಮ ಆರನೇ ಪತ್ನಿ ಹಾಗೂ ರಾಜಕುಮಾರಿ ಹಯಾ ಬಿತ್ ಅಲ್ ಹುಸೇನ್ ಅವರಿಗೆ 251.5 ದಶಲಕ್ಷ ಪೌಂಡ್ ನೀಡಬೇಕು. ಮಕ್ಕಳಾದ ಅಲ್ ಜಲೀಲ ಹಾಗೂ ಜಯೀದ್ ಅವರಿಗೆ 290 ದಶಲಕ್ಷ ಪೌಂಡ್‌ಗಳ ಬ್ಯಾಂಕ್ ಗ್ಯಾರಂಟಿ

(3ನೇ ಪುಟಕ್ಕೆ)

## ಸುಳ್ಳು ಸುದ್ದಿ ಹರಡುತ್ತಿದ್ದ 20 ಯೂಟ್ಯೂಬ್ ಚಾನಲ್ 2 ವೆಬ್ ತಾಣಗಳಿಗೆ ತಡೆ

ನವದೆಹಲಿ, ಡಿ. 21- ಭಾರತ ವಿರೋಧಿಯಾಗಿ ಕಾರ್ಯನಿರ್ವಹಿಸುತ್ತಾ ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದ 20 ಯೂಟ್ಯೂಬ್ ಚಾನಲ್ ಹಾಗೂ ಎರಡು ವೆಬ್ ತಾಣಗಳನ್ನು ತಡೆದಿರುವುದಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾ ಲಯ ತಿಳಿಸಿದೆ. ಈ ಚಾನಲ್ ಹಾಗೂ ವೆಬ್ ತಾಣಗಳು ಪಾಕಿಸ್ತಾನದಲ್ಲಿ ಕಾರ್ಯ ನಿರ್ವಹಿಸುತ್ತಾ ಭಾರತದ ಸೂಕ್ಷ್ಮ ವಿಚಾ ರಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದವು ಎಂದು ಸಚಿವಾಲಯ ಹೇಳಿದೆ.

# ಗಣಿತ-ವಿಜ್ಞಾನ ಭವಿಷ್ಯವನ್ನೂ ರೂಪಿಸಲಿ

## ದಾವಿವಿ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರೊ.ಗಾಯತ್ರಿ

ದಾವಣಗೆರೆ, ಡಿ.21- ನಿತ್ಯದ ಬದುಕಿನ ಅವಿಭಾಜ್ಯ ಅಂಗವಾಗಿರುವ ಗಣಿತ ಮತ್ತು ವಿಜ್ಞಾನವು ಶೈಕ್ಷಣಿಕ ಅಧ್ಯಯನಕ್ಕೆ ಸೀಮಿತ ವಾಗದೆ ಭವಿಷ್ಯ ವನ್ನು ರೂಪಿಸುವಂತಾಗ ಬೇಕು. ಗಣಿತ ಹಾಗೂ ವಿಜ್ಞಾನವು ಆಸಕ್ತಿದಾಯಕ ಕಲಿಕೆ ಯಾದಾಗ ಶಿಕ್ಷಣದ ಉದ್ದೇಶ ಸಫಲವಾ ಗುತ್ತದೆ ಎಂದು ದಾವಣಗೆರೆ ವಿಶ್ವವಿದ್ಯಾನಿ ಲಯದ ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಗಣಿತ ಶಿಕ್ಷಣ: ಅಭ್ಯಾಸಗಳು, ನಿರೀಕ್ಷೆಗಳು ಮತ್ತು ಸವಾಲುಗಳು ಹಾಗೂ ವಿಜ್ಞಾನ ಮತ್ತು ವಿಜ್ಞಾನ ಶಿಕ್ಷಣ ಕುರಿತು ಏರ್ಪಡಿಸಿರುವ ಮೂರು ದಿನಗಳ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.


ಮಕ್ಕಳು ಎಲ್ಲ ವಿಚಾರಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಾರೆ. ಅವರ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವ ಜೊತೆಗೆ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಕೊಂಡು ಪ್ರಾಯೋಗಿಕವಾಗಿ ಮನವರಿಕೆ ಮಾಡಿ ಕೊಡುವುದು ಮುಖ್ಯ. ಕಲಿಕಾಸಕ್ತಿ ಬೆಳೆಸಲು ಗಣಿತ ಆಟದಂತಿರಬೇಕು ಹಾಗೂ ವಿಜ್ಞಾನ ಮನರಂಜನೆಯಿಂದ ಕೂಡಿರಬೇಕು ಎಂದು ಸಲಹೆ ನೀಡಿದರು.

ಅಜೀಂ

(2ನೇ ಪುಟಕ್ಕೆ)

# ಮೀಸಲಾತಿ ಪಡೆದುಕೊಳ್ಳಲು ಹೋರಾಟಕ್ಕೆ ನಾವು ಸದಾ ಸಿದ್ಧ

## ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ



ಹೊನ್ನಾಳಿ, ಡಿ.21- ವಾಲ್ಮೀಕಿ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಮೀಸಲಾತಿ ಅತ್ಯಗತ್ಯ ವಾಗಿದೆ. ಶೇ. 7.5ರಷ್ಟು ಮೀಸಲಾತಿ ಪಡೆದುಕೊಳ್ಳಲು ಹೋರಾಟಕ್ಕೆ ನಾವು ಸದಾ ಸಿದ್ಧ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಸುಂಕದಕಟ್ಟೆ ರಸ್ತೆಯ ವಾಲ್ಮೀಕಿ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ವಾಲ್ಮೀಕಿ ಸಮಾಜದ ಸಭೆಯಲ್ಲಿ ಅವರು ಮಾತನಾಡಿದರು.

ದಶಕಗಳ ಹಿಂದೆ ನಿಗದಿಪಡಿಸಲಾಗಿರುವ ಮೀಸಲಾತಿಯನ್ನೇ ಇಂದಿಗೂ ಮುಂದುವರೆಸಿ ಕೊಂಡು ಬರಲಾಗಿದೆ. ಜನಸಂಖ್ಯೆಗೆ ಅನುಗು ಣವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗ ವರದಿ ನೀಡಿದ್ದರೂ ಸರ್ಕಾರ ಜಾರಿಗೊ ಳಿಸಿಲ್ಲ. ಇದರಿಂದ ವಾಲ್ಮೀಕಿ ಸಮು ದಾಯ ನೋವು ಅನುಭವಿಸುವಂ ತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಾಲ್ಮೀಕಿ ಸಮುದಾಯಕ್ಕೆ 1958ರಲ್ಲಿ ನಿಗದಿಪಡಿಸಿದ್ದ ಮೀಸಲಾತಿ ಪ್ರಮಾಣವನ್ನು ದೇವರಾಜ ಅರಸು ಆಡಳಿತಾವಧಿಯಲ್ಲಿ ಕೊಂಚ ಹೆಚ್ಚಿಸಲಾಯಿತು. ಬಳಿಕ, ಹಾವನೂರು ಆಯೋಗದ ವರದಿಯಂತೆ ವಾಲ್ಮೀಕಿ ಸಮುದಾ ಯವನ್ನು ಎಸ್ಟಿಗೆ ಸೇರ್ಪಡೆಗೊಳಿಸಲಾಯಿತು. 2013ರಲ್ಲಿ ಸಿದ್ಧರಾಮಯ್ಯ ವಾಲ್ಮೀಕಿ ಸಮುದಾಯಕ್ಕೆ ಪ್ರತ್ಯೇಕ

(2ನೇ ಪುಟಕ್ಕೆ)

# 22 ಸಾವಿರ ಬೀದಿ ದೀಪದ ಬದಲಾಗಿ ಎಲ್‌ಇಡಿ ಲೈಟ್ ಅಳವಡಿಕೆ

## ಮೇಯರ್ ಎಸ್.ಟಿ. ವೀರೇಶ್

ದಾವಣಗೆರೆ, ಡಿ.21- ನಗರದಲ್ಲಿನ 22 ಸಾವಿರ ಬೀದಿ ದೀಪಗಳನ್ನು ತೆರವುಗೊಳಿಸಿ ಎಲ್‌ಇಡಿ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಂಡಿರುವುದಾಗಿ ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದಾರೆ.

ಮಹಾನಗರ ಪಾಲಿಕೆಯಲ್ಲಿ ಇಂದು ಏರ್ಪಾಡಾಗಿದ್ದ ಪಾಲಿಕೆಯ ಬಜೆಟ್ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಸಲಹೆಗಳನ್ನು ಸ್ವೀಕರಿಸಿ ಮಾತನಾಡಿದ ಅವರು, ಎಲ್‌ಇಡಿ ದೀಪಗಳ ನಿರ್ವಹಣೆ ಒಂದೇ ಕಡೆ ಇರುವುದರಿಂದ ಬೆಳಗ್ಗೆ ಅನಗತ್ಯವಾಗಿ ದೀಪಗಳು ಉರಿಯುವುದು ತಪ್ಪಲಿದೆ ಎಂದರು.

ಸಿ.ಜಿ. ಆಸ್ಪತ್ರೆಗೆ ಬರುವ ರೋಗಿಗಳು ಹಾಗೂ ಸಂಬಂಧಿಗಳಿಗೆ ತಂಗಲು ಹಾಗೂ ಆಹಾರಕ್ಕೆ ಆಸ್ಪತ್ರೆ ಆವರಣದಲ್ಲಿ ವ್ಯವಸ್ಥೆ ಕಲ್ಪಿಸಲಾಗುವುದು. ಖಾಲಿ ನಿವೇಶನದ ಸ್ವಚ್ಛತಾ ಹೊಣೆ ಮಾಲೀಕರದ್ದಾಗಿದ್ದು, ನಿವೇಶನ ಸ್ವಚ್ಛಗೊಳಿಸಿ ದಂಡ ವಿಧಿಸುವ ಕಾರ್ಯ ಈಗಾಗಲೇ ಪ್ರಗತಿಯಲ್ಲಿದೆ ಎಂದರು.

ವಾರ್ಡ್ ಮಟ್ಟದಲ್ಲಿ ಸಮಸ್ಯೆಗಳನ್ನು ಆಲಿಸಲು ಕ್ರಮ ಕೈಗೊಳ್ಳಲಾಗುವುದು. ಪಾರ್ಕ್‌ಗಳ ನಿರ್ವಹಣೆಯನ್ನು ಈ ಹಿಂದೆ ಉತ್ತಮವಾಗಿ ನಿರ್ವಹಿಸಿದವರಿಗೆ ನೀಡಲಾಗಿದೆ. ಆಸಕ್ತ ಸಂಘ- ಸಂಸ್ಥೆಗಳಿಗೆ ನಿರ್ವಹಣಾ ಹೊಣೆ ವಹಿಸಲು ಅಭ್ಯಂತರವಿಲ್ಲ ಎಂದರು. ನಗರದಲ್ಲಿ 59 ಸಾವಿರ ಗಿಡಗಳನ್ನು ನೆಟ್ಟು, ನಿರ್ವಹಣೆಗಾಗಿ ಕ್ರಮವಹಿಸಲಾಗಿದೆ ಎಂದರು.



> **ಸಾಮಾಜಿಕ ಪ್ರಜ್ಞೆಯೂ ಮುಖ್ಯ**
> ರಾಜಕೀಯ ಪ್ರಭಾವಿಗಳೇ ಚರಂಡಿ ಮೇಲೆ ಮನೆ ಕಟ್ಟಿಕೊಳ್ಳುತ್ತಿರುವುದು ನಗರದ ದುರಂತ ಎಂದು ಹೇಳಿದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜನರಲ್ಲಿ ಸಾಮಾಜಿಕ ಪ್ರಜ್ಞೆ ಇರಬೇಕು. ಅಧಿಕಾರಿಗಳಿಂದಲೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಟಿವಿ ಸ್ಟೇಷನ್ ಕೆರೆ ಅಭಿವೃದ್ಧಿಗೆ ಸರ್ಕಾರ ಒಪ್ಪಿಗೆ ನೀಡಲಾಗಿದೆ. ನಂತರದ ಅಗತ್ಯ ಅಭಿವೃದ್ಧಿ ಕಾರ್ಯಗಳು ಪಾಲಿಕೆಯಿಂದ ನಡೆಯಲಿವೆ ಎಂದು ಭರವಸೆ ನೀಡಿದರು. ವೃತ್ತಿ ತೆರಿಗೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಮೇಯರ್ ವೀರೇಶ್ ಹೇಳಿದರು.

ಕಂದಾಯ ಕಟ್ಟುವ ವ್ಯವಸ್ಥೆಯನ್ನು ಡಿಜಿಟಲೈಜೇಷನ್ ಮಾಡಲು ಕ್ರಮ ವಹಿಸಲಾಗಿದ್ದು, ಪ್ರತಿ ವಾರ್ಡ್ ಬಿಲ್ ಕಲೆಕ್ಟರ್‌ಗೂ ಪ್ರತ್ಯೇಕ ಕಂಪ್ಯೂಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಬ್ಯಾಂಕ್ ಅಕೌಂಟ್‌ಗಳನ್ನು ಲಿಂಕ್ ಮಾಡಲಾಗಿದ್ದು, ಒಂದು ತಿಂಗಳೊಳಗೆ ಡಿಜಿಟಲ್ ಪ್ರಕ್ರಿಯೆ ಮುಗಿಯಲಿದೆ. ಕಂದಾಯ ಕಟ್ಟುವ ಪ್ರಕ್ರಿಯೆ ಸರಳವಾಗಲಿದೆ ಎಂದು ಪಾಲಿಕೆ ಮುಖ್ಯ ಆಡಳಿತಾಧಿಕಾರಿ ಪ್ರಶಾಂತ್ ನಾಯಕ್ ಹೇಳಿದರು.


## ಕೈಲಾಸ ಶಿವಗಣಾರಾಧನೆ



ಜನನ 21-01-1964
ಮರಣ 10-12-2021

**ಲಿಂ. ಶ್ರೀ ಮಂಜುನಾಥ ಎಸ್.**
Civil Engineer and Contractor
(ದಿ॥ ಕೆ.ಜಿ.ಶಂಕರಪ್ಪ, ನಿವೃತ್ತ ಕಾರ್ಯಪಾಲಕ ಅಭಿಯಂತರರು ಹಾಗೂ ದಿ॥ ಸುವರ್ಣಮ್ಮ ಇವರ ಪುತ್ರ)

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಇಟ್ಟಿಗಿ ಗ್ರಾಮದ ದಾವಣಗೆರೆ ವಾಸಿ
**ಶ್ರೀಮತಿ ವಿನುತ ಮಂಜುನಾಥ ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 10-12-2021ನೇ ಶುಕ್ರವಾರ ಬೆಳಿಗ್ಗೆ 8.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಮಂಜುನಾಥ ಎಸ್.**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ: 22-12-2021ನೇ ಬುಧವಾರ ಬೆಳಿಗ್ಗೆ 10.30ಕ್ಕೆ ತ್ರಿಶೂಲ್ ಕಲಾಭವನ, ತ್ರಿಶೂಲ್ ಟಾಕೀಸ್ ಎದುರು, ಕೆ.ಬಿ.ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು**
**ಶ್ರೀಮತಿ ವಿನುತ ಮಂಜುನಾಥ ಮತ್ತು ಮಕ್ಕಳಾದ ಡಾ॥ ರಚಿತಾ ಹಾಗೂ ರಚನಾ**
ಶ್ರೀಮತಿ ವಿಮಲಮ್ಮ ಮತ್ತು ಮಕ್ಕಳು ಇಟ್ಟಗಿ
ಶ್ರೀಮತಿ ಬಿ.ಪಿ.ಗಂಗಮ್ಮ, ಶ್ರೀ ಮಲ್ಲಿಕಾರ್ಜುನಪ್ಪ ಮತ್ತು ಮಕ್ಕಳು, ಭೀಮಸಮುದ್ರ.
ಶ್ರೀಮತಿ ಸುನಂದ, ಶ್ರೀ ರಾಜಶೇಖರ್ ಬಿ.ಎಂ. ಮತ್ತು ಮಕ್ಕಳು, ದಾವಣಗೆರೆ.
ಶ್ರೀಮತಿ ಪ್ರೇಮ, ಡಾ॥ ಎ.ಜಿ.ಕರಿಬಸಪ್ಪ ಮತ್ತು ಮಕ್ಕಳು ದಾವಣಗೆರೆ
ಶ್ರೀಮತಿ ಶಾಂತ, ಶ್ರೀ ರಮೇಶ ಮತ್ತು ಮಕ್ಕಳು, ಹುಬ್ಬಳ್ಳಿ.
ಹಾಗೂ ಕೋಟೆಗೌಡ್ರು ವಂಶಸ್ಥರು, ಇಟ್ಟಗಿ ಮತ್ತು ಬಂಧು-ಮಿತ್ರರು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ.
ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. "ಎ" ಬ್ಲಾಕ್ ಚರ್ಚ್ ರಸ್ತೆಯಲ್ಲಿ 1 ಬೆಡ್ ರೂಂ 24 ತಾಸು ನೀರಿನ ವ್ಯವಸ್ಥೆಯಿರುವ ಸುಸಜ್ಜಿತ ಮೊದಲ ಮಹಡಿ ಮನೆ ಬಾಡಿಗೆಗೆ ಇರುತ್ತದೆ. ಆಸಕ್ತರು ವಿಚಾರಿಸಿರಿ :
98442 28851

**ಬೇಕಾಗಿದ್ದಾರೆ**
ಸೌತ್ ಭಟ್ಟರು, ಬೆಣ್ಣೆ ದೋಸೆ ಭಟ್ಟರು, ಚೈನೀಸ್ & ಚಾಟ್ಸ್ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ
90601 72745

**ಬೇಕಾಗಿದ್ದಾರೆ**
ಮಿಲ್ಟ್ರಿ ಹೋಟೆಲ್‌ನಲ್ಲಿ ಕೆಲಸ ಮಾಡಲು ಕ್ಲೀನರ್-2, ಸಪ್ಲೈಯರ್ - 2, ಯುವಕರು ಮತ್ತು ಯುವತಿಯರಿಗೆ ಅವಕಾಶವಿದೆ.
ಸಂಪರ್ಕಿಸಿ: ಪವಾರ್ ಫ್ಯಾಮಿಲಿ ರೆಸ್ಟೋರೆಂಟ್, ಸಿತಾರ ಹೋಟೆಲ್ ಪಕ್ಕ, ಪಿ.ಬಿ.ರಸ್ತೆ, ದಾವಣಗೆರೆ.
ಮೊ: 93410 83995

**ಮನೆ ಲೀಸ್/ಬಾಡಿಗೆಗೆ**
ಲೋಕಿಕೆರೆ ಕೈಗಾರಿಕಾ ವಲಯ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಹತ್ತಿರವಿರುವ 2 BHK ಲಿಫ್ಟ್ ಕಾರ್ ಪಾರ್ಕಿಂಗ್, ನೀರಿನ ವ್ಯವಸ್ಥೆ, ಸುಸಜ್ಜಿತ 1 ಮನೆ ಲೀಸ್/ಬಾಡಿಗೆಗೆ ಇದೆ ವಿಚಾರಿಸಿ
99004 11110
99865 38099

**WANTED**
Boys required for computerized billing at Food Mart Supermarket. Experienced candidate will have preference.
Quli: B.Com/ Any degree.
Mob : 98864 63531

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ 2ನೇ ಬಸ್‌ಸ್ಟಾಪ್ ಹತ್ತಿರ, 3 ಬೆಡ್‌ರೂಂ ಇರುವ ಮೊದಲನೇ ಮಹಡಿ ಮನೆ ಬಾಡಗೆಗಿದೆ.
ಸಂಪರ್ಕಿಸಿ
ಮೊ. 94481 78327

**ಬೇಕಾಗಿದ್ದಾರೆ**
SSLC ಅಥವಾ PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2

**ಬೇಕಾಗಿದ್ದಾರೆ**
ನಮಗೆ ಅಕೌಂಟ್ಸ್ ಬರೆಯಲು Tally ಕಲಿತ ಅನುಭವವಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಸಂಪರ್ಕಿಸಿ:
ಆನಂದ ಹಾರ್ಡ್‌ವೇರ್ಸ್ ಅಂಡ್ ಪೇಂಟ್ಸ್, ಮಂಡಿಪೇಟೆ, ದಾವಣಗೆರೆ.

**ಬೇಕಾಗಿದ್ದಾರೆ**
ಫರ್ನೀಚರ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಮತ್ತು ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ. ದಾವಣಗೆರೆ ನಗರದವರಿಗೆ ಆದ್ಯತೆ, ನೇರವಾಗಿ ಭೇಟಿ ಮಾಡಿ.
ಕಬ್ಬೂರ್ ಫರ್ನೀಚರ್ಸ್
ನರಸರಾಜ ರಸ್ತೆ, ಹಳೇ ಸಿರಿಗೆರೆ ಹಾಸ್ಟೆಲ್ ಬಿಲ್ಡಿಂಗ್, ದಾವಣಗೆರೆ-1
98443 10140, 98444 26300

**ಬೇಕಾಗಿದ್ದಾರೆ**
ಪಿಯುಸಿ/ಪದವಿ ಆಗಿರುವ ಮಹಿಳೆಯರು ರಿಸೆಪ್ಷನಿಸ್ಟ್ ಕೆಲಸಕ್ಕೆ 5000/- ವೇತನ. ಪಿಯುಸಿ ಆಗಿರುವ ಯುವಕರು ಮಾರ್ಕೆಟಿಂಗ್ ಕೆಲಸಕ್ಕೆ. ವೇತನ 6000/- ಕೆಲಸದ ವೇಳೆ: ಬೆ. 9 ರಿಂದ 6
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್
ಲಾಯರ್ ರೋಡ್ 86602 35013

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**WANTED**
EXPERIENCE XEROX OPERATORS
SALARY- 6,000 - 10,000
CONTACT
94481 54682

**Required**
PRO's for reputed PU Science college in Davangere
89702 25551

**ಬಾಡಿಗೆಗೆ/ ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ.
(ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)
96388 17967
73380 43912

**WANTED**
B.Ed (English) Lady Teacher for High School
Ph : 95358 85997

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ತಕ್ಷಣವೇ ಈ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಿ. ಆಕರ್ಷಕ ಸಂಬಳ ಮತ್ತು ESI&PF ಸೌಲಭ್ಯವಿರುತ್ತದೆ.
63667 28552, 96060 50591
96060 50593

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಮೊ : 81339 33804

**WANTED**
Banking Sector Computer operator (Male Only) Salary : 12,000+ Incentive
Qualification:- BBM/B.Com/ M.Com and Computer Knowledge.
Contact No : 78929 94180
Address: # 3367/1 Arunodaya, MCC B' Block, Shamanur Road Opp Ashraya hospital Davangere- 577006

**ಬೇಕಾಗಿದ್ದಾರೆ**
ಆಯಾಗಳು, GNM/ ANM ನರ್ಸ್‌ಗಳು, ವಾರ್ಡ್ ಬಾಯ್ ಬೇಕಾಗಿದ್ದಾರೆ.
ಸಂಪರ್ಕಿಸಿ
ಮೊ. 89708 65248


# ಕಾಲಮಿತಿ ಹೇಳಲಾಗದು

**(1ನೇ ಪುಟದಿಂದ)** ವರದಿಯನ್ನು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಸರ್ಕಾರಕ್ಕೆ ನೀಡಲಾಗುತ್ತದೆ ಎಂದವರು ಹೇಳಿದರು.

ಈ ಭಾಗದ ಕೆಲವು ಸಮಾಜದವರು ಸಹ ನಮ್ಮದು ಚಿಕ್ಕ ಸಮಾಜ, ನಮಗೂ ಸಹ ಮೀಸಲಾತಿ ಅವಕಾಶ ಕಲ್ಪಿಸಬೇಕೆಂಬ ವಿಚಾರಗಳನ್ನು ಹೇಳಿದರು. ಆದರೆ, ನಾವು ಎಲ್ಲವನ್ನೂ ಗಮನಿಸಿ ಸರ್ಕಾರಕ್ಕೆ ಒಂದು ಒಳ್ಳೆಯ ವರದಿ ಕೊಡುವುದಾಗಿ ಹೇಳಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ರಾಜ್ಯದ ಪಂಚಮಸಾಲಿ ಸಮಾಜದ ಜನರ ಮೂಲ ಕಸುಬು ವ್ಯವಸಾಯ. ಸಮಾಜದ ಜನರು ಕೃಷಿಯನ್ನು ನಂಬಿ ಬದುಕನ್ನು ಕಟ್ಟಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಅದರಲ್ಲೂ ಈ ಭಾಗದ ಪಂಚಮಸಾಲಿ ಸಮಾಜದ ಜನರ ಬದುಕು ಬಹಳ ದುಸ್ಥರವಾಗಿದೆ ಎಂದರು.

ಈ ಪ್ರದೇಶ ಭದ್ರಾ ಅಚ್ಚುಕಟ್ಟು ಪ್ರದೇ ಶದ ಕೊನೆಯ ಭಾಗದಲ್ಲಿ ಇರುವುದರಿಂದ ಇಲ್ಲಿನ ರೈತರು ಬಹಳ ಸಂಕಷ್ಟದ ಸ್ಥಿತಿಯಲ್ಲಿ ಇದ್ದಾರೆ. ಅತಿವೃಷ್ಟಿ - ಅನಾವೃಷ್ಟಿ ಹೆಚ್ಚಾಗಿ ಆಗುತ್ತಿರುವುದರಿಂದ ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ವ್ಯವಸ್ಥೆ ಬುಡಮೇಲಾಗಿದೆ. ಇಂತಹ ಸಮಯದಲ್ಲಿ ಸಮಾಜದ ಜನರಿಗೆ 2 ಎ ಮೀಸಲಾತಿ ಬಹಳ ಅವಶ್ಯವಾಗಿದೆ ಎಂದರು.

ಈ ವೇಳೆ ಬನ್ನಿಕೋಡು ಗ್ರಾಮದ ಜಿ.ಹೆಚ್. ಪಟೇಲ್, ಮಾದೇಗೌಡ, ಮಂಜುಳಾ, ಶಾಂತಮ್ಮ, ಹನುಮಂತಪ್ಪ, ಕೊಟ್ರಪ್ಪ, ದೇವೇಂದ್ರಪ್ಪ, ಮಂಜಪ್ಪ, ಕಾಳಮ್ಮ, ವೀರಪ್ಪ, ಚೆನ್ನಬಸಪ್ಪ, ಚೆಟ್ಯಪ್ಪ ರೇಣುಕಮ್ಮ ಇನ್ನೂ ಅನೇಕರು ಮಾತನಾಡಿ, ತಮಗೆ ವ್ಯವಸಾಯ ಮಾಡಲು ಜಮೀನುಗಳಿಲ್ಲ. ಸ್ವಂತ ಮನೆಗಳಿಲ್ಲ. ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸುವುದಕ್ಕೆ ಕಷ್ಟವಾಗಿದೆ ಎಂದು ತಮ್ಮ ನೋವನ್ನು ಹೇಳಿಕೊಂಡರು.

ಈ ಸಂದರ್ಭದಲ್ಲಿ ನಿಯೋಗದ ಸದಸ್ಯರಾದ ಕಲ್ಯಾಣ ಕುಮಾರ್, ರಾಜಶೇಖರ್, ಸುವರ್ಣ ಕೆ.ಟಿ. ಅರುಣ್ ಕುಮಾರ್, ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಗಂಗಪ್ಪ, ರಂಗನಾಥ, ಹರಿಹರ ಹಿಂದುಳಿದ ವರ್ಗಗಳ ಇಲಾಖೆಯ ಪರವೀನ್ ಬಾನು, ತಾಪಂ ಇಓ ಗಂಗಾಧರನ್, ಪಿಡಿಓ ಬಿರಾದಾರ, ಹೆಚ್. ಎಸ್. ಅರವಿಂದ್, ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಗೋಪನಾಳ ಅಶೋಕ, ದೀಟೂರು ಶೇಖರಪ್ಪ, ಪರಮೇಶ್ವರ ಗೌಡ್ರು,ಎಸ್. ಪಿ. ಜಯದೇವ, ಜೆ. ರಾಮನಗೌಡ, ಎ.ಪಿ. ಶಿವಪ್ಪ, ಹನುಮಂತಪ್ಪ ಮಾಗನೂರು, ಹೆಚ್.ಹೆಚ್. ನಾಗರಾಜ್, ಜಿ.ಹೆಚ್. ಸುರೇಶ್, ಎಂ.ಜಿ. ನಿಜಲಿಂಗಪ್ಪ, ಎಂ.ಎಂ. ಮಹೇಶ್, ನಾಗರಾಜ್ ಹೊರಟ್ಟಿ, ನಾಗರಾಜ್, ಹೆಚ್.ಹೆಚ್ ಬಸವರಾಜ್, ಸುಭಾಷ್ ಬಿ.ಹೆಚ್. ಅಜಯ್ ಪಟೇಲ್, ಹೆಚ್. ಪಂಚಪ್ಪ, ಹೆಚ್. ರಾಮನಗೌಡ, ಹೆಚ್. ನಾಗಪ್ಪ, ನಟರಾಜ್ , ಎಂ. ಎಸ್. ಬಸವರಾಜ್, ಜಯಪ್ರಕಾಶ್ ಸತ್ತೂರು, ಪಿ.ಎನ್. ವಾಗೀಶ್, ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು.

# ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕೈಗಾರಿಕೆ ಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ

**(1ನೇ ಪುಟದಿಂದ)** ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾನಿಲಯ ಸ್ಥಾಪಿಸುವ ಮಸೂದೆಗೂ ವಿಧಾನಸಭೆ ಅಂಗೀಕಾರ ನೀಡಿದೆ.

ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದ ನಿಯಮಗಳ ತಿದ್ದುಪಡಿ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ನಿಯಮಗಳಿಗೆ ತಿದ್ದುಪಡಿ ತರುವ ಮಸೂದೆಗಳಿಗೂ ಒಪ್ಪಿಗೆ ನೀಡಲಾಗಿದೆ.

# ಗಣಿತ-ವಿಜ್ಞಾನ ಭವಿಷ್ಯವನ್ನೂ ರೂಪಿಸಲಿ



**(1ನೇ ಪುಟದಿಂದ)** ಪ್ರೇಮ್‌ಜಿ ವಿಶ್ವವಿದ್ಯಾಲಯದ ಅನುವಾದ ಉಪಕ್ರಮ ವಿಭಾಗದ ಸಹ ನಿರ್ದೇಶಕ ಎಸ್.ವಿ. ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿ, ವಿಜ್ಞಾನ ಮತ್ತು ಗಣಿತ ಅಧ್ಯಯನದ ಬಗ್ಗೆ ಮಕ್ಕಳಲ್ಲಿರುವ ಹಿಂಜರಿಕೆಯನ್ನು ಹೋಗಲಾಡಿಸಿ, ಕ್ರಿಯಾಶೀಲವಾಗಿ, ಪ್ರಯೋಗಾತ್ಮಕವಾಗಿ ಆಸಕ್ತಿ ಬೆಳೆಸುವ ಪ್ರಯತ್ನವನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಾಡುತ್ತಿದೆ. ಈಗಾಗಲೇ ರಾಜ್ಯದ 11 ಜಿಲ್ಲೆಗಳಲ್ಲಿ ಪ್ರಾಯೋಗಿಕ, ಸಕಾರಾತ್ಮಕ ಶಿಕ್ಷಣ ಮತ್ತು ಕಲಿಕಾ ಸಾಮರ್ಥ್ಯ ಹೆಚ್ಚಿಸುವ ಕೆಲಸವನ್ನು ಸಂಸ್ಥೆ ನಡೆಸುತ್ತಿದೆ ಎಂದರು.

ಕಲಾ ನಿಕಾಯದ ಡೀನ್ ಪ್ರೊ. ಕೆಬಿ. ರಾಮಲಿಂಗಪ್ಪ ಮಾತನಾಡಿ, ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಕಬ್ಬಿಣದ ಕಡಲೆ ಎಂದು ಪರಿಭಾವಿಸಲಾಗುತ್ತಿದೆ. ವಾಸ್ತವವಾಗಿ ಮಕ್ಕಳಲ್ಲಿ ಕಲಿಯುವ ಆಸಕ್ತಿಗಿಂತ ಕಲಿಸುವ ವಿಧಾನದಲ್ಲಿ ಬೋಧಕರು ಪ್ರಯೋಗಶೀಲರಾಗಿದ್ದಾಗ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ತಿಳಿಸಿದರು.

ವಾಣಿಜ್ಯ ನಿಕಾಯದ ಡೀನ್ ಪ್ರೊ. ಪಿ.ಲಕ್ಷ್ಮಣ, ಗಣಿತಶಾಸ್ತ್ರ ಅಧ್ಯಯನ ವಿಭಾಗದ ಸಹಪ್ರಾಧ್ಯಾಪಕ ಡಾ. ಪ್ರಸನ್ನಕುಮಾರ, ಭೌತವಿಜ್ಞಾನ ನಿಕಾಯದ ಸಹ ಪ್ರಾಧ್ಯಾಪಕ ಡಾ. ಕೆ.ಎಂ. ಈಶ್ವರಪ್ಪ, ಕಂಪ್ಯೂಟರ್ ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕ ಡಾ. ಚಂದ್ರಕಾಂತ ನಾಯ್ಕೋಡಿ ಉಪಸ್ಥಿತರಿದ್ದರು. ವಿಜ್ಞಾನ ನಿಕಾಯದ ಡೀನ್ ಪ್ರೊ. ರಾಮಲಿಂಗಪ್ಪ ಸ್ವಾಗತಿಸಿದರು. ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷ ಡಾ. ಶಿವಕುಮಾರ ಕಣಸೋಗಿ ಕಾರ್ಯಕ್ರಮ ನಿರೂಪಿಸಿದರು. ಗಣಿತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಜಿ.ಡಿ.ಪ್ರಕಾಶ್ ವಂದಿಸಿದರು.

ಮೊದಲ ದಿನ ನಡೆದ ವಿಚಾರ ಸಂಕಿರಣದಲ್ಲಿ ಆರು ಅಧಿವೇಶನಗಳು ನಡೆದವು. ಡಾ.ಯು.ಎಸ್. ಮಹಾಬಲೇಶ್ವರ, ಪ್ರೊ. ರಾಮಲಿಂಗಪ್ಪ, ಡಾ. ಜಿ.ಡಿ. ಪ್ರಕಾಶ್, ಡಾ. ಪ್ರಸನ್ನಕುಮಾರ, ಪ್ರೊ. ಎಸ್.ಶಿಶುಪಾಲ, ಡಾ.ಕೆ.ಎಂ.ಈಶ್ವರಪ್ಪ ಅವರು ವಿವಿಧ ಅಧಿವೇಶನಗಳ ಅಧ್ಯಕ್ಷತೆ ವಹಿಸಿದ್ದರು.

# ಪಡೆದುಕೊಳ್ಳಲು ಹೋರಾಟಕ್ಕೆ ಸದಾ ಸಿದ್ಧ



**(1ನೇ ಪುಟದಿಂದ)** ಆರ್ಥಿಕ ಅನುದಾನ ನೀಡಿದರು. ಬಿ.ಎಸ್. ಯಡಿಯೂರಪ್ಪ ವಾಲ್ಮೀಕಿ ಸಮುದಾಯಕ್ಕೆ ಶೇ. 7.5ರಷ್ಟು ಮೀಸಲಾತಿ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, ಅದು ಇಂದಿಗೂ ಈಡೇರಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಾದರೂ ವಾಲ್ಮೀಕಿ ಸಮುದಾಯಕ್ಕೆ ಶೇ.7.5ರಷ್ಟು ಮೀಸಲಾತಿ ನೀಡಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದು ವಿವರಿಸಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಗೌರವಾಧ್ಯಕ್ಷ ತಿಮ್ಮೇನಹಳ್ಳಿ ಟಿ.ಆರ್. ಚಂದಪ್ಪ, ಅಧ್ಯಕ್ಷ ಕುಳಗಟ್ಟೆ ಕೆ.ಎಲ್. ರಂಗನಾಥ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

66ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಬೆಂಗಳೂರಿನ ಕಲಾ ಬಂಧು ಫೌಂಡೇಷನ್ ನೀಡುವ 2021ರ 'ಕನ್ನಡ ರತ್ನ' ರಾಜ್ಯ ಪ್ರಶಸ್ತಿ ವಿಜೇತ ರಟ್ಟೆಹಳ್ಳಿ ತಾಲ್ಲೂಕು ಅಣಜಿ-ನಾಗವಂದದ ಶ್ರೀ ಮಾರುತಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ, ಮೂಲತಃ ಹೊನ್ನಾಳಿ ತಾಲ್ಲೂಕಿನ ಕೋಣನತಲೆ ಗ್ರಾಮದ ಎಚ್.ಇ. ರವಿಕುಮಾರ್ ಅವರನ್ನು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಸನ್ಮಾನಿಸಿದರು.

# ಹೆಚ್ಚುವರಿ ಪರಿಹಾರ

**(1ನೇ ಪುಟದಿಂದ)** 13,500 ರೂಪಾಯಿ ನಿಗದಿಯಾಗಿದ್ದು, ಇದಕ್ಕೆ ಹೆಚ್ಚುವರಿಯಾಗಿ 11,500 ರೂಪಾಯಿ ಸೇರಿಸಿ ಒಟ್ಟು 25,000 ರೂ. ಬೆಳೆ ಪರಿಹಾರ ನೀಡಲು ತೀರ್ಮಾನಿಸಲಾಗಿದೆ.

ಒಂದು ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಗೆ 18 ಸಾವಿರ ರೂಪಾಯಿ ಪರಿಹಾರ ನೀಡಲಾಗುತ್ತಿದೆ. ಇದಕ್ಕೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದಿಂದ 10,000 ರೂಪಾಯಿ ನೀಡಲು ನಿರ್ಧರಿಸಲಾಗಿದೆ. ಪ್ರತಿ ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಗೆ ಒಟ್ಟು 28 ಸಾವಿರ ರೂಪಾಯಿ ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

# ಆನಗೋಡಿನಲ್ಲಿ ಇಂದು ಸ್ವ- ಉದ್ಯೋಗಾಸಕ್ತರಿಗೆ ಅರಿವು

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಬೆಂಗಳೂರು) ಇವರ ಸಹಯೋಗದಲ್ಲಿ ಸ್ವಂತ ಉದ್ಯೋಗ ಕೈಗೊಳ್ಳಲು ಆಸಕ್ತಿ ಇರುವ ಫಲಾನುಭವಿಗಳಿಗೆ ಪಿ.ಎಂ.ಇ.ಜಿ.ಪಿ. ಯೋಜನೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವು ಆನಗೋಡು ಗ್ರಾಮದ ವಾಲ್ಮೀಕಿ ಭವನದಲ್ಲಿ ಇಂದು ನಡೆಯಲಿದೆ ಎಂದು ಖಾದಿ ಮಂಡಳಿಯ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ.


**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ,**
**ದೊಡ್ಡಬಾತಿ, ದಾವಣಗೆರೆ ಜಿಲ್ಲೆ**

**ಪತ್ರಿಕಾ ಪ್ರಕಟಣೆ**

**ಕಾರ್ಖಾನೆಯ 2020-21ನೇ ಸಾಲಿನ 52ನೇ ವಾರ್ಷಿಕ ವರ್ಚುಯಲ್ ಮಹಾಸಭೆಯ ನೋಟೀಸ್**

***ಕಾರ್ಖಾನೆಯ ಷೇರುದಾರರ ಗಮನಕ್ಕೆ***

ಈ ಮೂಲಕ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ, ಈ ಕಾರ್ಖಾನೆಯ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್-19 ವೈರಸ್ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶದ ಪ್ರಕಾರ ಕಾರ್ಖಾನೆಯ ಸದಸ್ಯರ ಸುರಕ್ಷತೆಯ ಹಿತದೃಷ್ಟಿಯಿಂದ ಕಾರ್ಖಾನೆಯ ವಾರ್ಷಿಕ ಮಹಾಸಭೆಯನ್ನು ವಿಡಿಯೋ ಕಾನ್ಫರೆನ್ಸ್ / ವರ್ಚ್ಯುಯಲ್ ಮೂಲಕ **ದಿನಾಂಕ 23.12.2021 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ** ಕಾರ್ಖಾನೆಯ ಅಧ್ಯಕ್ಷರಾದ ಮಾನ್ಯ **ಶ್ರೀ ಹೆಚ್.ಎಸ್. ಶಿವಶಂಕರ್**ರವರು, ಮಾಜಿ ಶಾಸಕರು ಇವರ ಅಧ್ಯಕ್ಷತೆಯಲ್ಲಿ ನಡೆಸಲು ತಿರ್ಮಾನಿಸಲಾಗಿರುತ್ತದೆ. ಈಗಾಗಲೇ ವಾರ್ಷಿಕ ಮಹಾಸಭೆಯ ನೋಟೀಸ್‌ನಲ್ಲಿ ಮೊಬೈಲ್ ಲಿಂಕನ್ನು ಕಳುಹಿಸಲಾಗಿರುತ್ತದೆ. ದಿನಾಂಕ 23.12.2021ರಂದು ನಿಮ್ಮ ಮೊಬೈಲ್‌ನಿಂದ http: bsskn.esdinfra.com/ ಲಿಂಕನ್ನು ಒತ್ತುವುದರ ಮೂಲಕ ತಮ್ಮ ಷೇರು ಖಾತೆ ಸಂಖ್ಯೆಯನ್ನು ನಮೂದಿಸಿ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ ವೀಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ವಿನಂತಿಸಲಾಗಿದೆ ಹಾಗೂ ವೆಬಿನಾರ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ವಾರ್ಷಿಕ ಮಹಾಸಭೆಯ ಹಾಜರಾತಿ ಎಂದು ಪರಿಗಣಿಸಲಾಗುವುದು.

ಸಹಿ/- (ಬಿ.ಜಯಪ್ರಕಾಶ್) ವ್ಯವಸ್ಥಾಪಕ ನಿರ್ದೇಶಕರು
ಸಹಿ/- (ಹೆಚ್.ಎಸ್. ಶಿವಶಂಕರ್ ) ಅಧ್ಯಕ್ಷರು ಹಾಗೂ ಮಾಜಿ ಶಾಸಕರು

**GOLD SHOP FURNITURE ಮಾರಾಟಕ್ಕೆ ಇವೆ**
1) AC Machine - 2
2) Godrej Locker Door-1 (7x3)
3) CC Camara-6, 4) TV-1
5) Entrance Glass Door-2 (8x3)
6) Gold Disply Rubber Wood Counters Lamination-4, 7) Disply Mirror-2
8) ಅಲ್ಯೂಮಿನಿಯಂ ಷೋಕೇಸ್-2
9) 16 Draws, 16 ಸೆಲ್ಫ್ with Lighiting
10) Marbal Cash Counter - 1
ಹೊಸದಾಗಿ ಜ್ಯೂಯಲರಿ ಶಾಪ್ ಮಾಡಲು FURNITURES ಅನುಕೂಲತೆ ಇದೆ.
99451 59582
99451 99770

**ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ದಾವಣಗೆರೆಯ ಹೆಸರಾಂತ ಸೂಟಿಂಗ್ & ಶರ್ಟಿಂಗ್ ಹಾಗೂ ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕಾರ್ಯ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ.
90353 61640

Whole sale ದರದಲ್ಲಿ ಸುಗಂಧ ಭರಿತ ಅಗರಬತ್ತಿ, ಸಾಂಬ್ರಾಣಿ, ಕರ್ಪೂರ ದೊರೆಯುತ್ತವೆ. ದಿನಕ್ಕೆ 500-600 ರೂಪಾಯಿಗಳನ್ನು ಗಳಿಸಬಹುದು.
89712 81856
88675 15890

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡ ಬಾತಿ)
ಸಂಪರ್ಕಿಸಿ
88920 08800

**ರಾಗಿ ಹುಲ್ಲು ಮಾರಾಟಕ್ಕಿದೆ**
ದಾವಣಗೆರೆಯಿಂದ 20 ಕಿ.ಮೀ ದೂರದಲ್ಲಿ 8 ಎಕರೆ ಜಮೀನಿನಲ್ಲಿನ ರಾಗಿ ಹುಲ್ಲು 60 ಸಾವಿರಕ್ಕೆ ಮಾರಾಟಕ್ಕಿದೆ.
ಸಂಪರ್ಕಿಸಿ
88809 18401

**WANTED**
Accountant-2
Davanagere and Hanagawadi Industrial Area
Krushi Taraupalin
P.B. Road, Davanagere
99011 55996

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**WANTED**
Female candidate for school office admin work.
Any degree with computer knowledge.Preference will be given to experienced candidate.Contact to
VINAYAKA CONVENT
kalikadevi road dvg. 95356 10817

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಲೈಸೆನ್ಸ್ ಹೊಂದಿರತಕ್ಕದ್ದು
73380 33337

**ಆತ್ಮಶಕ್ತಿ**
(ಮನಸ್ಸಿನ ಕಣ್ಣಿಗೆ ಗೋಚರಿಸುವ ಶಕ್ತಿ)
ಯಂತ್ರ, ಮಂತ್ರ, ತಂತ್ರ, ಸ್ತಂಭನ, ವಶೀಕರಣ, ಷಟ್ಕರ್ಮ ಒಟ್ಟು 15 ತರಹ ವಿದ್ಯೆಯ ತರಬೇತಿ ಹಾಗೂ ಪರಿಹಾರ ಇರುವುದು, ನಿಮ್ಮ ಸಮಸ್ಯೆಗೆ ಕರೆಯಲ್ಲಿ ಉಚಿತ ಸಲಹೆ ನೀಡುತ್ತಾರೆ. ಚಾನಲ್‌ನಲ್ಲಿ ಸೇವೆ ಸಲ್ಲಿಸಿ ಈಗ ದಾವಣಗೆರೆಯಲ್ಲಿರುತ್ತಾರೆ.
ಕರೆ ಮಾಡಿ : 97409 55345

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


## ಕಂದಾಯ ಸಚಿವಾಲಯ

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ : 1.1.2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಭೂಸ್ವಾಧೀನ ಕಾಯ್ದೆ ಕಲಂ 19(1) ರೊಂದಿಗೆ ಓದಲಾದ ಪ್ರಕರಣ 19(2) ಅನ್ವಯ ಘೋಷಣೆ**

**ಆರ್ ಡಿ 24 ಎಕ್ಯೂಸಿ 2021** **ದಿನಾಂಕ : 21.12.2021**

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಸ್ವತ್ತನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿ.ಪಿ.ಸಂ. : 41344/2015 ರಲ್ಲಿ ನೀಡಿರುವ ಆದೇಶದ ಮೇರೆಗೆ ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹಳೇ ಪಿ.ಬಿ. ರಸ್ತೆ ಅಗಲೀಕರಣದ ಭಾಗವಾಗಿ ತಾತ್ಕಾಲಿಕ, ಯೋಜನಾ ಕಛೇರಿಯ ನಿರ್ಮಾಣದ ಉದ್ದೇಶಕ್ಕಾಗಿ ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಹಳೇ ಪಿ.ಬಿ. ರಸ್ತೆಯಲ್ಲಿರುವ ಸ್ವತ್ತಿನ ಸ.ಂ 239, 1ಎ, 2, 3 ಬಿ ರಲ್ಲಿನ ಸ್ವತ್ತಿನ ಭೂಸ್ವಾಧೀನ ಅಗತ್ಯವಾಗಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಕಂಡು ಬಂದಿರುವುದರಿಂದ, ಕೇಂದ್ರ ಅಧಿನಿಯಮ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 11(1) ರಂತೆ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಅಧಿಸೂಚನೆ ಕ್ರಮಾಂಕ : ಭೂಸ್ವಾಧೀನ/ಸಿಆರ್/96/2020-21, ದಿನಾಂಕ : 19.03.2021 ರಂತೆ ರಾಜ್ಯ ಪತ್ರದಲ್ಲಿ ದಿ. 22.3.2021ರಂದು ಅಧಿಸೂಚನೆ ಹೊರಡಿಸಲಾಗಿರುವುದರ ಮೇರೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಾವಳಿ 2015 ರ ನಿಯಮ 10 ರಂತೆ ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 19(1) ರನ್ವಯ ಅಧಿಸೂಚನೆ ಹೊರಡಿಸಲಾಗಿದೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2015ರ ನಿಯಮ 2 (ಸಿ) ರನ್ವಯ ಜಿಲ್ಲಾಧಿಕಾರಿಗಳ ಕಾರ್ಯಗಳನ್ನು ನಿರ್ವಹಿಸಲು ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರನ್ನು ನೇಮಕ ಮಾಡಿರುತ್ತದೆ. ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತಿನ ವಿವರಗಳು ಈ ಕೆಳಗಿನ ಅನುಸೂಚಿಯಂತೆ ಇರುತ್ತವೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 15(1)ರ ಪ್ರಕಾರ ಕಲಂ 11(1)ರ ಪ್ರಕಟಣೆಯ ಬಗ್ಗೆ ನೀಡಲಾದ ನೋಟಿಸುಗಳ ವಿಚಾರವಾಗಿ ಬಾಧಿತ ವ್ಯಕ್ತಿಗಳಿಂದ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ವಿಚಾರಣೆ ಮಾಡಲಾಗಿದೆ. ಭೂಸ್ವಾಧೀನಕ್ಕೆ ಒಳಪಡಿಸಲು ಉದ್ದೇಶಿಸಿರುವ ಸ್ವತ್ತು ಸರಳ ರೇಖೆಯಲ್ಲಿ ಬರುತ್ತಿದ್ದು, ಈ ಸಂಬಂಧ ಕಲಂ 16(1) ಮತ್ತು 17 ರನ್ವಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ವ್ಯವಸ್ಥೆಯ ಬಗ್ಗೆ ವರದಿ ತಯಾರಿಸಲಾಗಿದ್ದು, ಅದರಂತೆ ಈ ಭೂ ಸ್ವಾಧೀನ ಪ್ರಕರಣದಲ್ಲಿ ಯಾವುದೇ ಕುಟುಂಬವು ಪುನರ್‌ವಸತಿ ಮತ್ತು ಪುನರ್ನಿರ್ಮಾಣ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸದರಿ ವರದಿಯನ್ನು ಮಾನ್ಯ ರಾಜ್ಯ ಆಯುಕ್ತರು ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಕಂದಾಯ ಇಲಾಖೆ, ಬೆಂಗಳೂರು ಇವರು ಪತ್ರ ಸಂಖ್ಯೆ 58 ಬಿ.ಆರ್.ಆರ್. 2021 ದಿನಾಂಕ : 17.12.2021ರಂತೆ ಅನುಮೋದನೆ ನೀಡಿರುತ್ತಾರೆ.

ಈ ಪ್ರಕಟಣೆಯ ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ 19(1)ರನ್ವಯ ಅಧಿಸೂಚನೆ ಹೊರಡಿಸಲಾಗಿದೆ. ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತಿನ ನಕ್ಷೆಯನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

**19(1) ಅನುಸೂಚಿ**

**ಜಿಲ್ಲೆ : ದಾವಣಗೆರೆ, ತಾಲ್ಲೂಕು : ದಾವಣಗೆರೆ, ಹೋಬಳಿ : ಕಸಬಾ, ಗ್ರಾಮ : ದಾವಣಗೆರೆ ಟೌನ್**

| ಕ್ರ.ಸಂ. | ಖಾತೆದಾರರ ಹೆಸರು | ಸ್ವತ್ತಿನ ಸಂಖ್ಯೆ 3 | ಭೂಸ್ವಾಧೀನವಾಗುವ ವಿಸ್ತೀರ್ಣ (ಚ.ಅ) | ಚಕ್ಕುಬಂದಿ | | | | ಮರವಳಿಗಳು/ ರಚನೆಗಳು ಹೆಸರು & ಸಂಖ್ಯೆ | ಪರಾ |
|---|---|---|---|---|---|---|---|---|---|
| | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | |
| 1 | 2 | | 4 | 5 | 6 | 7 | 8 | 9 | 10 |
| 1 | ಶ್ರೀ ಡಿ.ಎಸ್.ಕುಮಾರ್ ಸ್ವಾಮಿ ಬಿನ್ ಡಿ. ಶೇಖರಪ್ಪ ಮತ್ತು ಶ್ರೀಮತಿ ರೇಖಾ ಕುಮಾರ್ ಕೋಂ ಡಿ.ಎಸ್. ಕುಮಾರಸ್ವಾಮಿ | 239, 1 ಎ, 2, 3ಬಿ | 255 | ಕನ್ಸರ್ವೆನ್ಸಿ | ರವಿಕುಮಾರ್ ಅವರಿಗೆ ಸೇರಿದ ಸ್ವತ್ತು | ಪಿ.ಬಿ. ರಸ್ತೆ | ಕುಮಾರಸ್ವಾಮಿ ಉಳಿದ ಸ್ವತ್ತು (# 239 1ಎ, 2,3 ಬಿ) | -- | -- |

| ಘೋಷ್ವಾರೆ | | | (ವಿಸ್ತೀರ್ಣ ಚ.ಅ.ಗಳಲ್ಲಿ) |
|---|---|---|---|
| ಕ್ರ.ಸಂ. | ಗ್ರಾಮ | ಸ್ವತ್ತಿನ ಸಂಖ್ಯೆ | ಭೂಸ್ವಾಧೀನವಾಗುವ ವಿಸ್ತೀರ್ಣ (ಚ.ಅ.) |
| 1 | ದಾವಣಗೆರೆ ಟೌನ್ | 239,1ಎ, 2,3ಬಿ | 255 |

ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿ
ದಾವಣಗೆರೆ ಉಪವಿಭಾಗ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಎನ್. ಆನಂದ್
ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ-2)

# ನಗರದ ರೈಲ್ವೇ ಕ್ವಾಟ್ರಸ್‌ನಲ್ಲಿ ಮನೆಗೆ ಕನ್ನ

ದಾವಣಗೆರೆ, ಡಿ.21- ರೈಲ್ವೆ ಕ್ವಾಟ್ರಸ್ ನಲ್ಲಿ ರೈಲ್ವೇ ಇಲಾಖೆ ನೌಕರನೋರ್ವರ ಮನೆಗೆ ಕನ್ನ ಹಾಕಿರುವ ಕಳ್ಳರು, ಸುಮಾರು 19 ಸಾವಿರ ಮೌಲ್ಯದ ಚಿನ್ನಾಭರಣ ದೋಚಿರುವ ಬಗ್ಗೆ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂಲತಃ ಹಿರೇಕೆರೂರು ತಾಲ್ಲೂಕು ಕ್ಯಾತನಕೆರೆಯ ಮಾರುತಿ ಕೆ. ಬಾಲಣ್ಣನವರ ರೈಲ್ವೆ ಇಲಾಖೆಯ ಸಿಜಿ ಮ್ಯಾನ್. ಅವರು ನಿನ್ನೆ ಬೆಳಿಗ್ಗೆ ಮನೆಗೆ ಬೀಗ ಹಾಕಿಕೊಂಡು ಮೌನೇಶ್ವರ ಬಡಾವಣೆಯಲ್ಲಿನ ಮಾವನವರ ಮನೆಗೆ ಹೋಗಿ ವಾಪಸ್ ಸಂಜೆ ತಮ್ಮ ಮನೆಗೆ ಬರುವ ವೇಳೆಗೆ ಈ ಕೃತ್ಯ ನಡೆದಿತ್ತು.

ಮನೆಯ ಹಿಂಬಾಗಿಲು ಚಿಲಕ ಮುರಿದು ಒಳ ಪ್ರವೇಶಿಸಿದ ಕಳ್ಳರು ಆಭರಣಗಳನ್ನು ಕಳವು ಮಾಡಿದ್ದಾರೆ.

## ಮೊದಲನೇ ವರ್ಷದ ಪುಣ್ಯಸ್ಮರಣೆ



ಜನನ 21.02.1946

ಮರಣ 22.12.2020

**ದಿ || ಶ್ರೀ ಡಿ. ನಂಜುಂಡಪ್ಪ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ-ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ

ಪತ್ನಿ: ಶ್ರೀಮತಿ ಹೆಚ್.ಬಿ. ರುದ್ರಮ್ಮ
ಮಕ್ಕಳಾದ : ಡಿ.ಎನ್. ಸಿದ್ದಪ್ಪ , ಡಿ.ಎನ್. ಮಂಜುನಾಥ್, ಡಿ.ಎನ್. ಸವಿತಾ, ಅಳಿಯ: ಕೆ.ಟಿ. ದೇವೇಂದ್ರಪ್ಪ
ಮೊಮ್ಮಗಳು: ಶಿಶಿರ. ಡಿ. ಹಾಗೂ ಬಂಧು-ಮಿತ್ರರು, ದಾವಣಗೆರೆ.

## ಎಸ್.ಟಿ. ನಿಂಗಪ್ಪ ನಿಧನ



ದಾವಣಗೆರೆ ಆಜಾದ್ ನಗರ 1ನೇ ಮೇನ್, 1ನೇ ಕ್ರಾಸ್ ವಾಸಿ ಬಾಪೂಜಿ ಆಸ್ಪತ್ರೆ ಡಿ ಗ್ರೂಪ್ ನೌಕರರಾಗಿದ್ದ ಎಸ್.ಟಿ. ನಿಂಗಪ್ಪ (58) ಇವರು ದಿನಾಂಕ 21.12.2021ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.12.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಶಾಂತೇಶ್ ಗುತ್ತಲ್ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ ರಾಘವೇಂದ್ರಸ್ವಾಮಿ ಹಿಂಭಾಗದ ವಾಸಿ, ಶಾಂತೇಶ್ ಗುತ್ತಲ್ (64) ಇವರು ದಿನಾಂಕ 21.12.2021ರ ಮಂಗಳವಾರ ರಾತ್ರಿ 8ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.12.2021ರ ಬುಧವಾರ ಬೆಳಿಗ್ಗೆ 10 ಗಂಟೆಗೆ ಪಿ.ಬಿ. ರಸ್ತೆ ವೈಕುಂಠಧಾಮದಲ್ಲಿ ನೆರವೇರಲಿದೆ.

# ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್‌ಗೆ 7 ಕ್ರೀಡಾಪಟುಗಳು



### ಜಿಲ್ಲೆಯಲ್ಲಿ ಸೌಲಭ್ಯಗಳ ಕೊರತೆ

ಪ್ಯಾರಾ ಬ್ಯಾಡ್ಮಿಂಟನ್ ಕ್ರೀಡಾಪಟುಗಳಿಗೆ ಜಿಲ್ಲೆಯಲ್ಲಿ ಸೌಲಭ್ಯಗಳ ಕೊರತೆ ಪ್ರಮುಖವಾಗಿ ಕಂಡುಬರುತ್ತಿದೆ

ತರಬೇತಿ ನೀಡಲು ಪ್ರತ್ಯೇಕವಾದ ಕೋಚ್‌ಗಳಿಲ್ಲ. ವಿಕಲಚೇತನ ಬ್ಯಾಡ್ಮಿಂಟನ್ ಆಟಗಾರರಿಗೆ ತಕ್ಕನಾದ ವ್ಹೀಲ್‌ಚೇರ್‌ಗಳಿಲ್ಲ. ಪ್ರತ್ಯೇಕ ಅಂಕಣದ ಅವಶ್ಯವಿದೆ ಎಂದು ಬಿ. ಎಸ್. ಇಂದೂಧರ ತಮ್ಮ ಅಳಲನ್ನು ತೋಡಿಕೊಂಡರು.

ಜಿಲ್ಲಾ ಸಂಸ್ಥೆಯವರ ಸಹಕಾರ ಬಿಟ್ಟರೆ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯಾವ ಸಹಾಯಧನ ಇಲ್ಲದಿರುವುದು ಬೇಸರದ ಸಂಗತಿ ಎಂದರು.

ದಾವಣಗೆರೆ, ಡಿ.21- ಒಡಿಸ್ಸಾದ ಭುವನೇಶ್ವರದಲ್ಲಿ ಇದೇ ದಿನಾಂಕ 24 ರಿಂದ 26 ರವರೆಗೆ ನಡೆಯಲಿರುವ 4 ನೇಯ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜಿಲ್ಲೆಯ ಏಳು ವಿಕಲಚೇತನ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಪ್ಯಾರಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಡಾ. ಎ.ಎನ್. ಶಿವಕುಮಾರ್ ಅವರು ನಗರದ ನೇತಾಜಿ ಸುಭಾಷ್ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ರಾಜ್ಯದಿಂದ ಆಯ್ಕೆಯಾದ 15 ಆಟಗಾರರ ಪೈಕಿ ಏಳು ಜನ ದಾವಣಗೆರೆ ಜಿಲ್ಲೆಯವರೇ ಆಗಿರುವುದು ಹೆಮ್ಮೆಯ ವಿಚಾರ. ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಜಿಲ್ಲೆಯ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ, 11 ಪದಕಗಳನ್ನು ಪಡೆದಿದ್ದಾರೆ.

ಎ. ಸುಧಾ, ಕೆ. ಶಿಲ್ಪ, ಎಂ. ರುದ್ರಪ್ರಸನ್ನ, ಬಿ.ಎಸ್. ಇಂದೂಧರ, ಎ. ಅಬ್ದುಲ್ ಗಫೂರ್, ಬಿ.ಆರ್. ಪಾಂಡುರಂಗ ಸ್ವಾಮಿ, ಡಿ.ಎನ್. ಹನುಮಂತಪ್ಪ ಕರ್ನಾಟಕ ರಾಜ್ಯ ತಂಡಕ್ಕೆ ಆಯ್ಕೆಯಾದ ಹೆಮ್ಮೆಯ ಕ್ರೀಡಾಪಟುಗಳು ಎಂದು ಡಾ. ಶಿವಕುಮಾರ್ ಪರಿಚಯಿಸಿದರು.

ಭುವನೇಶ್ವರದಲ್ಲಿ 6 ಕೆಟಗರಿಯಲ್ಲಿ ಪಂದ್ಯಾವಳಿ ನಡೆಯ ಲಿದ್ದು, ಡಬ್ಲ್ಯು ಹೆಚ್ 1 ಹಾಗೂ ಡಬ್ಲ್ಯುಹೆಚ್ 2 ಕೆಟಗರಿಯಲ್ಲಿ ಜಿಲ್ಲೆಯ ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿದೆ. ಅವರು ನಾಳೆ ದಿನಾಂಕ 21ರ ಬುಧವಾರ ನಗರದಿಂದ ರೈಲಿನಲ್ಲಿ ಭುವನೇಶ್ವರಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

ಜಿಲ್ಲಾ ಪ್ಯಾರಾ ಬ್ಯಾಡ್ಮಿಂಟನ್ ಸಂಸ್ಥೆಯ ಜೆ.ಬಿ. ಉಮೇಶ್, ಈ. ದೇವೇಂದ್ರಪ್ಪ, ಬಿ.ಎಂ. ಕರಿಬಸಪ್ಪ, ಎನ್.ಹೆಚ್. ಬಸವರಾಜ್, ಕಲ್ಲೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಎಂಇಎಸ್ ದುಷ್ಕರ್ಮಿಗಳ ಗಡೀಪಾರಿಗೆ ಕಸಾಪ ಒತ್ತಾಯ



ದಾವಣಗೆರೆ, ಡಿ.21- ಕನ್ನಡಿಗರ ಸ್ವಾಭಿಮಾನದ ಸಂಕೇತವಾದ ಕನ್ನಡ ಧ್ವಜಕ್ಕೆ ಬೆಂಕಿ ಹಚ್ಚಿದ ಎಂಇಎಸ್ ದುಷ್ಕರ್ಮಿಗಳನ್ನು ಗಡೀಪಾರು ಮಾಡುವಂತೆ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಇಂದು ಮನವಿ ಸಲ್ಲಿಸುವ ಸಂದರ್ಭದಲ್ಲಿ ಅವರು ಮಾತನಾಡಿದರು.

ಎಂಇಎಸ್ ಕಾರ್ಯಕರ್ತರು ಕನ್ನಡಿಗರ ಮತ್ತು ಕನ್ನಡ ನಾಡಿನ ಸ್ವಾಭಿಮಾನದ ಸಂಕೇತವಾದ ಕನ್ನಡ ಧ್ವಜಕ್ಕೆ ಬೆಂಕಿ ಹಚ್ಚಿ ಕನ್ನಡಿಗರ ಆತ್ಮಾಭಿಮಾನಕ್ಕೆ ಧಕ್ಕೆ ತಂದಿರುವುದು ಅಕ್ಷಮ್ಯ ಅಪರಾಧವಾಗಿದೆ. ಸರ್ಕಾರ ಕೂಡಲೇ ದುಷ್ಕರ್ಮಿಗಳನ್ನು ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಇಂತಹ ಹೇಯ ಕೃತ್ಯಗಳು ವಿವಿಧ ಭಾಷಿಕರ ನಡುವೆ ವೈಷಮ್ಯ ಹುಟ್ಟು ಹಾಕುವುದು ಮಾತ್ರವಲ್ಲದೇ ಅವರ ಸಾಮರಸ್ಯದ ಸಹಬಾಳ್ವೆಗೆ ಕೊಡಲಿಪೆಟ್ಟು ನೀಡುತ್ತದೆ. ವಿವಿಧ ರಾಜ್ಯಗಳ ವಿವಿಧ ಭಾಷಿಕರು ಕನ್ನಡ ನಾಡಿನಲ್ಲಿ ನೆಲೆಸಿ, ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ಅವರೆಲ್ಲಾ ನಾಡಿನ ಜನ, ನೆಲ, ಜಲ, ಗಡಿ, ಭಾಷೆ, ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿ, ಸಂಸ್ಕಾರದ ಬಗ್ಗೆ ಅತ್ಯಂತ ಗೌರವವನ್ನು ಹೊಂದಿರಬೇಕಾದ ಅಗತ್ಯವಿದೆ ಎಂದು ವಾಮದೇವಪ್ಪ ಅವರು ಹೇಳಿದರು.

ಈ ಸಂದರ್ಭದಲ್ಲಿ ಎ.ಆರ್. ಉಜ್ಜಿನಪ್ಪ, ಬಾ.ಮ. ಬಸವರಾಜಯ್ಯ, ಎ.ಮಹಾಲಿಂಗಪ್ಪ, ಬಿ.ಎನ್. ಮಲ್ಲೇಶ್, ಬಿ. ದಿಳ್ಳೆಪ್ಪ, ಕೆ. ರಾಘವೇಂದ್ರ ನಾಯರಿ, ಕೆ.ಬಿ. ಪರಮೇಶ್ವರಪ್ಪ, ಸಿರಿಗೆರೆ ಪರಮೇಶ್ವರಪ್ಪ, ಬೇತೂರು ಷಡಾಕ್ಷರಪ್ಪ, ಆನೆಕೊಂಡ ಲಿಂಗರಾಜ್, ಕಮ್ಮತ್ತಹಳ್ಳಿ ಲಿಂಗರಾಜ್, ಸಿದ್ದೇಶಪ್ಪ, ಶೈಲಾ ಮತ್ತಿತರರು ಉಪಸ್ಥಿತರಿದ್ದರು.

## ಬ್ರಿಟನ್‌ನಲ್ಲಿ ದುಬಾರಿ ವಿಚ್ಛೇದನ

(1ನೇ ಪುಟದಿಂದ) ನೀಡಬೇಕು ಎಂದು ನ್ಯಾಯಾಲಯ ಹೇಳಿದ.

ಮಕ್ಕಳ ಜೀವನ ಹಾಗೂ ತಂದೆಯ ಜೊತೆ ಅವರು ಯಾವ ರೀತಿ ಸಂಧಾನಕ್ಕೆ ಬರಲಿದ್ದಾರೆ ಎಂಬುದರ ಆಧಾರದ ಮೇಲೆ ಈ 290 ದಶಲಕ್ಷ ಪೌಂಡ್ ಮೊತ್ತ ನಿರ್ಧಾರವಾಗಲಿದೆ. ಹಯಾ ಹಾಗೂ ಮಕ್ಕಳ ಭದ್ರತೆಗಾಗಿ ಪ್ರತಿ ವರ್ಷ 11 ದಶ ಲಕ್ಷ ಪೌಂಡ್ ನೀಡಬೇಕು ಎಂದೂ ಸಹ ನ್ಯಾಯಾಧೀಶ ಫಿಲಿಪ್ ಮೂರ್ ಆದೇಶಿಸಿದ್ದಾರೆ.

ಕುಟುಂಬಕ್ಕೆ ಬಿಗಿ ಭದ್ರತೆ ಬೇಕಾಗಿದೆ. ಅತಿ ಹೆಚ್ಚಿನ ಬೆದರಿಕೆ ಇರುವುದು ಶೇಖ್ ಮೊಹಮ್ಮದ್ ಅವರಿಂದಲೇ ಹೊರತು ಹೊರಗಿನಿಂದಲ್ಲ ಎಂದು ನ್ಯಾಯಾಲಯ ಹೇಳಿದೆ. 47 ವರ್ಷದ ಹಯಾ ಅವರು 2019ರಲ್ಲಿ ತಮ್ಮ ಇಬ್ಬರು ಮಕ್ಕಳೊಂದಿಗೆ ಬ್ರಿಟನ್‌ಗೆ ಪಲಾಯನ ಮಾಡಿದ್ದರು. ಜೋರ್ಡಾನ್ ಮಾಜಿ ದೊರೆ ಹುಸೇನ್ ಪುತ್ರಿಯಾಗಿರುವ ಹಯಾ, ಇಬ್ಬರು ಮಕ್ಕಳೊಂದಿಗೆ ಗಲ್ಫ್ ಎಮಿರೇಟ್‌ಗೆ ಮರಳುವಂತೆ ಪತಿ ಬಲವಂತ ಮಾಡುತ್ತಿದ್ದಾರೆ. ಇದರಿಂದ ಹೆದರಿಕೆಯಾಗಿದೆ ಎಂದು ಹೇಳಿದ್ದರು. 72 ವರ್ಷದ ಶೇಖ್ ಮೊಹಮ್ಮದ್, ಯು.ಎ.ಇ. ಉಪಾಧ್ಯಕ್ಷ ಹಾಗೂ ಪ್ರಧಾನ ಮಂತ್ರಿಯಾಗಿದ್ದಾರೆ. ಶೇಖ್ ಮೊಹಮ್ಮದ್ ಅವರು ರಜೆ ವೆಚ್ಚಕ್ಕಾಗಿ 5.1 ದಶಲಕ್ಷ ಪೌಂಡ್, ಮಕ್ಕಳ ಸಿಬ್ಬಂದಿಗೆ 4.50 ಲಕ್ಷ ಪೌಂಡ್ ಹಾಗೂ ಪ್ರಾಣಿಗಳನ್ನು ಸಾಕಲು 2.75 ಲಕ್ಷ ಪೌಂಡ್ ನೀಡಲು ಆದೇಶಿಸಲಾಗಿದೆ.

ಈ ಹಿಂದೆ ರಷ್ಯಾದ ಕೋಟ್ಯಾಧೀಶ ಫರ್ಖಾದ್ ಅಖಿಮೆಡೋವ್ ಅವರು 2016ರಲ್ಲಿ ವಿಚ್ಛೇದನ ಪಡೆಯುವಾಗ ಪತ್ನಿಗೆ ಟಟಿಯಾನ ಅಖೆಡೋವಾ ಅವರಿಗೆ 450 ದಶಲಕ್ಷ ಪೌಂಡ್ ನೀಡಬೇಕೆಂದು ಬ್ರಿಟನ್ ನ್ಯಾಯಾಲಯ ಆದೇಶಿಸಿತ್ತು. ಆ ಸಮಯದಲ್ಲಿ ಇದು ಬ್ರಿಟನ್‌ನ ಅತ್ಯಂತ ದುಬಾರಿ ವಿಚ್ಛೇದನವಾಗಿತ್ತು.

# ಮತಾಂತರ ತಡೆ ಮಸೂದೆ ವಿಧಾನಸಭೆಯಲ್ಲಿ ಮಂಡನೆ

(1ನೇ ಪುಟದಿಂದ) ಜ್ಞಾನೇಂದ್ರ ಮಾತನಾಡಿ, ಮತಾಂತರ ನಿಷೇಧ ವಿಧೇಯಕ ಕಾಯ್ದೆ ಮಂಡನೆ ಮಾಡಿದರು. ತಿದ್ದುಪಡಿ ಕಾಯ್ದೆಯಲ್ಲಿ ಬಲವಂತ, ವಂಚನೆ, ಒತ್ತಾಯ ಹಾಗೂ ಆಮಿಷದ ಮೂಲಕ ನಡೆಸುವ ಮತಾಂತರ ಹಾಗೂ ಮದುವೆಯಾಗುವ ಭರವಸೆಯ ಮೂಲಕ ನಡೆಸುವ ಮತಾಂತರ ನಿಷೇಧಿಸುವುದೇ ಕಾಯ್ದೆಯ ಉದ್ದೇಶ ಎಂದು ತಿಳಿಸಿದ್ದಾರೆ.

ಮದುವೆಯಾಗುವ ಭರವಸೆಯ ಮೂಲಕ ಮತಾಂತರಕ್ಕೆ ಕಾಯ್ದೆಯಲ್ಲಿ ಅವಕಾಶವಿಲ್ಲ. ವ್ಯಕ್ತಿಯು ಆತನ ನಿಕಟಪೂರ್ವ ಧರ್ಮಕ್ಕೆ ಮತಾಂತರಗೊಂಡರೆ ಅದನ್ನು ಈ ನಿಯಮದಡಿಯಲ್ಲಿ ಮತಾಂತರವೆಂದು ಪರಿಗಣಿಸುವುದಿಲ್ಲ.

ಬಲವಂತದ ಮತಾಂತರಕ್ಕೆ 3 ರಿಂದ 5 ವರ್ಷಗಳ ಜೈಲು ಶಿಕ್ಷೆ ಹಾಗೂ 25 ಸಾವಿರ ರೂ.ಗಳ ದಂಡ ವಸೂಲಾತಿಗೆ ಅವಕಾಶ ಮಾಡಿಕೊಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ವ್ಯಕ್ತಿಯ ಬಲವಂತದ ಮತಾಂತರಕ್ಕೆ 3 ರಿಂದ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದ್ದು, ಅಷ್ಟೇ ಅಲ್ಲದೆ, 50 ಸಾವಿರ ರೂ. ದಂಡ ವಸೂಲಿಗೂ ಅನುವು ಮಾಡಿಕೊಡಲಾಗಿದೆ.

ಈ ವರ್ಗಕ್ಕೆ ಸೇರಿದವರು ಮತಾಂತರಗೊಂಡರೆ ಅಂತಹವರಿಗಿರುವ ಮೀಸಲಾತಿ ಹಕ್ಕನ್ನು ಕಸಿದುಕೊಳ್ಳುವ ಕಠಿಣ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಮತಾಂತರ ವಾಗಲು ಮುಂದಾಗಿರುವ ವ್ಯಕ್ತಿ ಕನಿಷ್ಠ 60 ದಿನಗಳ ಮೊದಲು ಜಿಲ್ಲಾ ದಂಡಾಧಿಕಾರಿಗಳಿಗೆ ಈ ಬಗ್ಗೆ ಅರ್ಜಿ ಸಲ್ಲಿಸಿಕೊಳ್ಳಬೇಕು. ಮತಾಂತರ ಮಾಡುವ ವ್ಯಕ್ತಿಯು ಜಿಲ್ಲಾ ದಂಡಾಧಿಕಾರಿಗಳಿಗೆ 30 ದಿನಗಳ ಮೊದಲೇ ಈ ಬಗ್ಗೆ ಮಾಹಿತಿ ನೀಡಬೇಕು.

ತಮಗೆ ಬಂದ ಮಾಹಿತಿಯನ್ನು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಕಚೇರಿ ಸೂಚನಾ ಫಲಕದಲ್ಲಿ ಹಾಕಬೇಕು, ಇದಕ್ಕೆ 30 ದಿನಗಳ ಒಳಗಾಗಿ ಆಕ್ಷೇಪಣೆ ಬಂದರೆ, ಕಂದಾಯ ಅಥವಾ ಸಮಾಜ ಕಲ್ಯಾಣ ಇಲಾಖೆ ಮೂಲಕ ವಿಚಾರಣೆ ನಡೆಸಲು ಅವಕಾಶ ಕಲ್ಪಿಸಲಾಗಿದೆ.

ವಿಚಾರಣೆ ಸಂದರ್ಭದಲ್ಲಿ ತಪ್ಪು ಕಂಡು ಬಂದಲ್ಲಿ ಕ್ರಿಮಿನಲ್ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ. ಮತಾಂತರ ಗೊಂಡ ವ್ಯಕ್ತಿಯು ಅಂದಿನಿಂದ ಹಿಡಿದು ಮೂಲ ಧರ್ಮ, ಮತಾಂತರಗೊಂಡ ಧರ್ಮ ಇನ್ನಿತರೆ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು.

ಅಪರಾಧಕ್ಕೆ ನೆರವು, ದುಷ್ಪ್ರೇರಣೆ ನೀಡಿ, ವ್ಯಕ್ತಿಯನ್ನು ಆರೋಪಿಯನ್ನಾಗಿ ಪರಿಗಣಿಸುವ ಅವಕಾಶ ಕಾನೂನಿನಲ್ಲಿ ಅಳವಡಿಸಲಾಗಿದೆ. ಮತಾಂತರಗೊಂಡ ವ್ಯಕ್ತಿಯ ಪೋಷಕರು, ಸಹೋದರ, ಸಹೋದರಿ, ಸಹವರ್ತಿ ಅಥವಾ ಸಹದ್ಯೋಗಿಗಳಿಗೂ ಮತಾಂತರದ ಬಗ್ಗೆ ದೂರನ್ನು ನೀಡಿದರೆ, ಅಂತಹವರ ವಿರುದ್ಧ ಎಫ್‌ಐಆರ್ ದಾಖಲಿಸಲು ಅವಕಾಶ ಮಾಡಲಾಗಿದೆ.

ಮತಾಂತರಕ್ಕೆ ಬಲಿಯಾದವರಿಗೆ ಆಪಾದಿತನಿಂದ ಸಂದಾಯವಾಗುವಂತೆ ಗರಿಷ್ಠ 5 ಲಕ್ಷ ರೂ. ಪರಿಹಾರ ಕೊಡಿಸಲು ಅವಕಾಶ ಮಾಡಿಕೊಡಲಾಗಿದೆ. ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಕ್ಕೆ ಭಾರತದ ಸಂವಿಧಾನದ ಭಾಗ 111, ಇತರ ಉಪಸಂಬಂಧಗಳಿಗೆ ಒಳಪಟ್ಟು ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಖಾತ್ರಿಗೊಳಿಸಲಾಗಿದೆ. ಖಾತ್ರಿಗೊಳಿಸಲಾದ ಮೂಲಭೂತ ಹಕ್ಕುಗಳ ಕಾರಣದಿಂದಾಗಿ ಎಲ್ಲ ವ್ಯಕ್ತಿಗಳು ತಮ್ಮ ಆಯ್ಕೆ ಯಾವುದೇ ಧರ್ಮವನ್ನು ಅಂಗೀಕರಿಸಲು, ಆಚರಿಸಲು ಮತ್ತು ಪ್ರಸಾರ ಮಾಡಲು ಮುಕ್ತ ಅವಕಾಶವಿರುತ್ತದೆ.

ರೆವರೆಂಡ್ ಸ್ಟ್ಯಾನಿಸ್ಲಾಸ್ ವಿರುದ್ಧ ಮಧ್ಯಪ್ರದೇಶ ಹಾಗೂ ಒರಿಸ್ಸಾ ರಾಜ್ಯ (1977) 1 ಎಸ್‌ಸಿಸಿ 677 ರಲ್ಲಿ ಸರ್ವೋಚ್ಚ ನ್ಯಾಯಾಲಯವು 25ನೇ ಅನುಚ್ಛೇದದಡಿಯಲ್ಲಿನ ಪ್ರಚಾರ ಮಾಡುವ ಹಕ್ಕು ಮತ್ತೊಬ್ಬ ವ್ಯಕ್ತಿಯನ್ನು ಮತಾಂತರಗೊಳಿಸುವ ಹಕ್ಕನ್ನು ಒಳಗೊಳ್ಳುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

## ಅವೈಜ್ಞಾನಿಕ ಕೆರೆ ಕೋಡಿ ಎತ್ತರ ಸರಿಪಡಿಸಲು ಆಗ್ರಹ



ದಾವಣಗೆರೆ, ಡಿ.21- ತಾಲ್ಲೂಕಿನ ಹೊನ್ನೂರು ಕೆರೆ ಕೋಡಿಯನ್ನು ಅವೈಜ್ಞಾನಿಕವಾಗಿ ಎತ್ತರ ಮಾಡಿದ್ದರಿಂದ ಹಿನ್ನೀರು ಹೆಚ್ಚಾಗಿ ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಕೋಡಿ ಎತ್ತರ ಕಡಿಮೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಮಲ್ಲಶೆಟ್ಟಿಹಳ್ಳಿ ಗ್ರಾಮದ ದಳಪತಿ ಜಿ.ಎಸ್. ರೇವಣಸಿದ್ದಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆರೆ ಕೋಡಿ ಎತ್ತರದಿಂದ ಜಮೀನುಗಳು ಜಲಾವೃತಗೊಂಡು ರೈತರ ಬದುಕು ಹೀನಾಯ ಸ್ಥಿತಿ ತಲುಪಿದೆ. ಅಡಿಕೆ, ಮೆಕ್ಕೆಜೋಳ ಬೆಳೆಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಕಳೆದ ಮೂರು ತಿಂಗಳಿನಿಂದ ಜಮೀನಿನಲ್ಲಿ ನೀರು ನಿಂತಿದ್ದು, ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ದೂರಿದರು.

ಸುಮಾರು 45 ವರ್ಷಗಳ ಹಿಂದೆ ಹೊನ್ನೂರು ಕೆರೆ ತುಂಬಿತ್ತಾದರೂ ಜಮೀನುಗಳಿಗೆ ನೀರು ನುಗ್ಗುವುದಾಗಲೀ, ಹಾನಿ ಉಂಟಾಗಿಲ್ಲ. ಆದರೆ ಕಳೆದ ಎರಡು ತಿಂಗಳ ಹಿಂದೆ ಸುರಿದ ಭಾರೀ ಮಳೆಗೆ ಕೊಗ್ಗನೂರು, ಆನಗೋಡು, ಸಿದ್ದನೂರು ಕೆರೆಗಳ ಕೋಡಿ ಬಿದ್ದು ಜಮೀನುಗಳಿಗೆ ನೀರು ನುಗ್ಗಿ ಅಪಾರ ನಷ್ಟ ಸಂಭವಿಸಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಜಿಲ್ಲಾಧಿಕಾರಿಗಳೂ ಅಗತ್ಯ ಕ್ರಮಕ್ಕೆ ಮುಂದಾಗಬೇಕು. ಸ್ಥಳ ಪರಿಶೀಲಿಸಿ, ಭೂ ಹಿಡುವಳಿದಾರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಎಂ. ಗಿರೀಶ್, ಬಸವರಾಜಪ್ಪ, ಡೋಲಿ ಚಂದ್ರು, ಹರೀಶ್ ಬಸಾಪುರ, ಬಸವರಾಜಪ್ಪ ಮತ್ತಿತರರಿದ್ದರು.

## ಹರಪನಹಳ್ಳಿಗಿಂದು ರಾಜನಹಳ್ಳಿ ಶ್ರೀ

ಅರಸಿಕೇರಿ ರಸ್ತೆಯ ಬಳಿ ಇರುವ ವಾಲ್ಮೀಕಿ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಶ್ರೀಗಳ ಸಾನ್ನಿಧ್ಯದಲ್ಲಿ ಪೂರ್ವಭಾವಿ ಸಭೆ ಜರುಗಲಿದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ತಿಳಿಸಿದ್ದಾರೆ.

ಮುಂಬರುವ 2022ನೇ ಫೆಬ್ರವರಿ 8 ಮತ್ತು 9 ನೇ ತಾರೀಖಿನಂದು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಜರುಗಲಿರುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ಪೂರ್ವಭಾವಿ ಸಭೆ ಜರುಗಲಿದೆ ಎಂದು ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಡಾ. ಚನ್ನಬಸವ ಪಟ್ಟದೇವರ ಜಯಂತಿ



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯ ವಿಚಾರದಲ್ಲಿ ಅಪಾರವಾಗಿ ಶ್ರಮಿಸಿದ, ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಡಾ. ಚನ್ನಬಸವ ಪಟ್ಟದೇವರು ಅವರ 132 ನೇ ಜಯಂತಿಯನ್ನು ಆಚರಿಸಲಾಗುವುದು ಎಂದು ಕಸಾಪ ಜಿಲ್ಲಾಧ್ಯಕ್ಷ ವಾಮದೇವಪ್ಪ ತಿಳಿಸಿದ್ದಾರೆ.


**REQUIRED**

**CLINICAL ASSISTANT FOR DENTAL CLINIC**

(Preferably Graduate Female)

MCC B block, Davangere.

Timings : 4 to 9 pm - On Holidays 10 to 2 pm

Contact with Bio Data : 98801 93453



**Davanagere Coffee Roasters & Tea Traders Association**

# 671/2A, Mandipet, Davanagere-577001.

**ಪ್ರಕಟಣೆ**

ಈ ಮೂಲಕ ಎಲ್ಲಾ ಗ್ರಾಹಕರಿಗೆ ತಿಳಿಸುವುದೇನೆಂದರೆ, ದಿನಾಂಕ 25.12.2021 ರಿಂದ ಕಾಫಿ ಪುಡಿ ದರವನ್ನು ಪ್ರತಿ ಕೆ.ಜಿ. 1ಕ್ಕೆ ರೂ. 40/- ರಂತೆ ಹೆಚ್ಚಳ ಮಾಡಿರುತ್ತೇವೆ.

ದಯವಿಟ್ಟು ಎಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

– ಅಧ್ಯಕ್ಷರು



**ANVITH ENTERPRISES FINANCIAL ADVISOR®**

P.J.Extension, Davanagere- 577 004


1. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ?
2. ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ,
3. Long- Term ಮತ್ತು Short- Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ
4. ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Childrens Savings plans, Retirement plans, Income -Tax Saving plans, Health plans, Term plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ.

vijaya Niranjana Mylara- 87926 73593



**ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ**

Numero Astrologer & Palmistry



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: ಪಂ. ಅರುಣ್ ಕುಮಾರ್ ಆಚಾರ್ಯ

ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ

ಮೊಬೈಲ್ : 94481 78626, 96068 18273

ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ



**ಕರ್ನಾಟಕ ಗ್ರಾಮೀಣ ಬ್ಯಾಂಕ್**

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ–583 103 (ಕರ್ನಾಟಕ)

ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ–577 004

ಫೋನ್: 08192 - 223913, 233632 e-mail: rodvg@kgbk.in

**ಚಿನ್ನಾಭರಣಗಳ ಬಹಿರಂಗ ಹರಾಜು**

ಈ ಕೆಳಕಂಡ ಗ್ರಾಹಕರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಈ ಕೆಳಕಂಡ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 30–12–2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 30–12–2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಸೊಕ್ಕೆ, ಜಗಳೂರು ತಾಲ್ಲೂಕು, ಮೊ : 9448653121**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ರೂಪಾ ಸಿ. ಬಿನ್. ಕರಿತಮ್ಮಯ್ಯ, ಗಡಿಮಾಕುಂಟೆ | 40821302017219 | 27,622–00 |
| 2 | ಶ್ರೀಮತಿ ಅಶ್ವಿನಿ ಎಂ. ಕೋಂ. ಹನುಮಂತಪ್ಪ ಹೆಚ್., ಸೊಕ್ಕೆ | 40821302024719 | 15,042–00 |
| 3 | ಶ್ರೀ ದಳಪತಿ ತಿಪ್ಪೇಸ್ವಾಮಿ ಬಿನ್. ಚನ್ನಬಸಪ್ಪ ಡಿ.., ಚಿಕ್ಕಬಂಟನಹಳ್ಳಿ | 40821302046319 | 55,621–00 |
| 4 | ಶ್ರೀ ಬಸವಲಿಂಗಪ್ಪ ಬಿನ್. ಸಿದ್ದರಾಮಪ್ಪ, ಚಿಕ್ಕಉಜ್ಜಿನಿ | 40821302042520 | 34,579–00 |
| 5 | ಶ್ರೀ ಬಸವಲಿಂಗಪ್ಪ ಬಿನ್. ಸಿದ್ದರಾಮಪ್ಪ, ಚಿಕ್ಕಉಜ್ಜಿನಿ | 40821302045820 | 10,790–00 |
| 6 | ಶ್ರೀ ನಾಗರಾಜ ಸಿ. ಬಿನ್. ಚನ್ನಪ್ಪ, ಚಿಕ್ಕಉಜ್ಜಿನಿ | 40821302048820 | 23,496–00 |
| 7 | ಶ್ರೀಮತಿ ರೇಣುಕಮ್ಮ ಕೆ.ಎನ್. ಕೋಂ. ಬಸವರಾಜಪ್ಪ ಕೆ.ಎನ್.,ಚಿಕ್ಕಬಂಟನಹಳ್ಳಿ | 40821302051820 | 17,003–00 |
| 8 | ಶ್ರೀ ಶಿವಣ್ಣ ಕೆ. ಬಿನ್.ಕೋಡಪ್ಪ ಸಿ., ಸೊಕ್ಕೆ | 40821302000820 | 31,265–00 |
| 9 | ಶ್ರೀ ಗೋವಿಂದಪ್ಪ ಬಿನ್. ಭೀಮಪ್ಪ, ಸೊಕ್ಕೆ | 40821302007220 | 11,776–00 |
| 10 | ಶ್ರೀ ಮಾಳಗಿ ಮಲ್ಲಪ್ಪ., ಚಿಕ್ಕಬಂಟನಹಳ್ಳಿ | 40821302008520 | 74,237–00 |
| 11 | ಶ್ರೀ ಕಬಳಿ ಹನುಮಂತಪ್ಪ ಬಿನ್. ಕಬಳಿ ಸಂಗಪ್ಪ, ಸೊಕ್ಕೆ | 40821302010320 | 1,15,645–00 |
| 12 | ಶ್ರೀ ಹನುಮಂತಪ್ಪ ಬಿ. ಬಿನ್. ಬಸಣ್ಣ, ಚಿಕ್ಕಉಜ್ಜಿನಿ | 40821302010620 | 17,198–00 |
| 13 | ಶ್ರೀಮತಿ ಮಾರಕ್ಕ ಕೋಂ. ನಿಂಗಪ್ಪ, ಸೊಕ್ಕೆ | 40821302011320 | 47,119–00 |
| 14 | ಶ್ರೀಮತಿ ಕವಿತಾ ಕೋಂ. ಅಜ್ಜಪ್ಪ ಕೆ.ಎಸ್., ಸೊಕ್ಕೆ | 40821302011620 | 40,149–00 |
| 15 | ಶ್ರೀಮತಿ ಮಂಜಮ್ಮ ಕೋಂ. ಮರಿಯಪ್ಪ, ಸೊಕ್ಕೆ | 40821302013020 | 20,449–00 |
| 16 | ಶ್ರೀ ಇಮಾಮ್ ಸಾಬ್ ಬಿನ್. ಸಾಬ್ಜಾನ್‌ಸಾಬ್, ಗಡಿಮಾಕುಂಟೆ | 40821302015720 | 30,761–00 |
| 17 | ಶ್ರೀ ಪರುಸಪ್ಪ ಬಿನ್. ಕುರುಡಪ್ಪಳ ಕರಿಯಪ್ಪ, ಸೊಕ್ಕೆ | 40821302016420 | 22,638–00 |
| 18 | ಶ್ರೀ ನಾಗರಾಜ ಬಿನ್. ಕಲ್ಲಪ್ಪ ಡಿ., ಚಿಕ್ಕಉಜ್ಜಿನಿ | 40821302017620 | 22,605–00 |
| 19 | ಶ್ರೀ ನಾಗೇಶಪ್ಪ ಬಿನ್. ಬೈಯ್ಯಣ್ಣ, ಗಡಿಮಾಕುಂಟೆ | 40821302018720 | 16,962–00 |
| 20 | ಶ್ರೀಮತಿ ಮಂಜಮ್ಮ ಕೋಂ. ನಿಂಗಪ್ಪ, ಗಡಿಮಾಕುಂಟೆ | 40821302019920 | 34,064–00 |
| 21 | ಶ್ರೀಮತಿ ವಿಜಯಲಕ್ಷ್ಮಿ ಕೋಂ. ನಾಗನಗೌಡ, ಸೊಕ್ಕೆ | 40821302021520 | 72,416–00 |
| 22 | ಶ್ರೀ ರಮೇಶ್ ಬಿ. ಬಿನ್. ಸಿದ್ದೇಶ್ ಬಿ., ಚಿಕ್ಕಉಜ್ಜಿನಿ | 40821302021620 | 15,881–00 |
| 23 | ಶ್ರೀಮತಿ ಮಂಜುಳ ಕೋಂ. ಪ್ರಕಾಶ್, ಚಿಕ್ಕಉಜ್ಜಿನಿ | 40821302021820 | 21,445–00 |
| 24 | ಶ್ರೀಮತಿ ರತ್ನಮ್ಮ ಕೋಂ. ರಾಮಪ್ಪ, ಸೊಕ್ಕೆ | 40821302024620 | 9,040–00 |
| 25 | ಶ್ರೀಮತಿ ಜಿ. ಮಾಲಮ್ಮ ಕೋಂ. ಸಿದ್ದಪ್ಪ ಕಬಳಿ, ಚಿಕ್ಕಉಜ್ಜಿನಿ | 40821302028220 | 67,561–00 |
| 26 | ಶ್ರೀ ನಾಗರಾಜ್ ಸಿ. ಬಿನ್. ಚನ್ನಪ್ಪ, ಚಿಕ್ಕಉಜ್ಜಿನಿ | 40821302029720 | 22,459–00 |
| 27 | ಶ್ರೀ ರೇಣಸಿದ್ದಪ್ಪ ಬಿನ್. ಮಲ್ಲಿಕಾರ್ಜುನಪ್ಪ, ಚಿಕ್ಕಬಂಟನಹಳ್ಳಿ | 40821302029920 | 67,503–00 |
| 28 | ಶ್ರೀ ತಿಪ್ಪೇಸ್ವಾಮಿ ಎನ್.ಎಂ. ಬಿನ್. ಬಸವರಾಜಯ್ಯ, ಗಡಿಮಾಕುಂಟೆ | 40821302030020 | 1,59,584–00 |
| 29 | ಶ್ರೀ ತಿಮ್ಮಣ್ಣ ಬಿನ್. ಚೌಡಪ್ಪ, ಸೊಕ್ಕೆ | 40821302031020 | 16,580–00 |
| 30 | ಶ್ರೀ ರೇವಣಸಿದ್ದಪ್ಪ ಬಿನ್. ತುಂಬಿಗೆರೆ ಚಂದ್ರಪ್ಪ, ಗೋಪಾಲಪುರ | 40821302033920 | 50,810–00 |
| 31 | ಶ್ರೀ ಬಸವರಾಜ ಎಸ್.ಬಿ. ಬಿನ್. ಕರಿಯಪ್ಪ, ಸೊಕ್ಕೆ | 40821302034320 | 1,71,899–00 |
| 32 | ಶ್ರೀ ನಾಗಪ್ಪ ಕಂಬ್ಳೇರ ಬಿನ್. ಭರ್ಮಪ್ಪ, ಸೊಕ್ಕೆ | 40821302035120 | 22,009–00 |
| 33 | ಶ್ರೀ ಉಮೇಶ ಜೆ. ಸಿ. ಬಿನ್. ಚನ್ನಬಸಪ್ಪ, ಗೋಪಾಲಪುರ | 40821302035720 | 14,707–00 |
| 34 | ಶ್ರೀಮತಿ ಶಾಂತಮ್ಮ ಕೋಂ. ಪರುಶಪ್ಪ, ಚಿಕ್ಕಉಜ್ಜಿನಿ | 40821302036120 | 43,963–00 |
| 35 | ಶ್ರೀ ಶಿವಣ್ಣ ಬಿನ್. ಸಿದ್ದಲಿಂಗಪ್ಪ, ಯರ್ಲಕಟ್ಟೆ | 40821302037520 | 10,972–00 |
| 36 | ಶ್ರೀ ಕೊಟ್ರೇಶ್ ಬಿನ್. ಲೇಟ್ ಎಂ. ಸಿದ್ದಲಿಂಗಪ್ಪ, ಸೊಕ್ಕೆ | 40821302037820 | 10,972–00 |
| 37 | ಶ್ರೀಮತಿ ರೇಣುಕಮ್ಮ ಕೋಂ. ಬಸವರಾಜಪ್ಪ ಕೆ. ಎನ್., ಚಿಕ್ಕಬಂಟನಹಳ್ಳಿ | 40821302038220 | 33,845–00 |
| 38 | ಶ್ರೀಮತಿ ಶಾಂತಮ್ಮ ಕೋಂ. ವೀರಣ್ಣ, ಸೊಕ್ಕೆ | 40821302038320 | 66,507–00 |
| 39 | ಶ್ರೀ ತಿಪ್ಪೇರುದ್ರಪ್ಪ ಬಿನ್. ಹನುಮಂತಪ್ಪ, ಸೊಕ್ಕೆ | 40821302038520 | 1,58,177–00 |
| 40 | ಶ್ರೀ ಬಿ.ಹೆಚ್. ಹೇಮಂತ್ ಬಿನ್. ಹನುಮಂತಪ್ಪ, ಸೊಕ್ಕೆ | 40821302038620 | 70,947–00 |
| 41 | ಶ್ರೀಮತಿ ನಾಗರತ್ನಮ್ಮ ಕೋಂ. ನಾಗರಾಜ, ಸೊಕ್ಕೆ | 40821302038820 | 83,949–00 |
| 42 | ಕವಿತಾ ಎಂ., ಚಿಕ್ಕಬಂಟನಹಳ್ಳಿ | 40821302039920 | 14,178–00 |
| 43 | ಶ್ರೀ ಬಸವರಾಜ ಬಿನ್. ಪೀನಪ್ಪ, ಗಡಿಮಾಕುಂಟೆ | 40821302002120 | 75,283–00 |
| 44 | ಶ್ರೀಮತಿ ರೇಣುಕಮ್ಮ ಕೋಂ. ಗೋಣಿಬಸಪ್ಪ, ಯರ್ಲಕಟ್ಟೆ | 40821302021120 | 15,032–00 |

ಸ್ಥಳ : ದಾವಣಗೆರೆ

ದಿನಾಂಕ : 21–12–2021

ಸಹಿ/– ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ಕಛೇರಿ,ದಾವಣಗೆರೆ.

## ಬೆಂಚ್‌ಪ್ರೆಸ್‌ನಲ್ಲಿ ದಾವಣಗೆರೆ ಕ್ಲಬ್‌ನ ಥಾಮಸ್ ವಿಜಯ ರಾಷ್ಟ್ರಮಟ್ಟಕ್ಕೆ ಆಯ್ಕೆ



ದಾವಣಗೆರೆ, ಡಿ.21- ವಿನೋಬನಗರದ ಶ್ರೀ ಸಿದ್ದಿವಿನಾಯಕ ಶಾಲಾ ಆವರಣದಲ್ಲಿ ಮೊನ್ನೆ ನಡೆದ ರಾಜ್ಯಮಟ್ಟದ ಸ್ಟೆಂತ್ ಲಿಫ್ಟಿಂಗ್ ಇನ್‌ಕ್ಲೇನಿಂಗ್ ಬೆಂಚ್ ಪ್ರೆಸ್ ಸ್ಪರ್ಧೆಯಲ್ಲಿ ದಾವಣಗೆರೆ ಕ್ಲಬ್ ಜಿಮ್ ಕ್ರೀಡಾಪಟು ಥಾಮಸ್ ವಿಜಯ ಅವರು ಬೆಂ 90 ಕೆಜಿ ಭಾರ ಎತ್ತುವ ಮೂಲಕ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿಕಲಚೇತನರಾಗಿ ಅಮೋಘ ಸಾಧನೆ ಮಾಡಿರುವ ವಿಜಯ ಅವರು ರಾಜಸ್ಥಾನದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇವರಿಗೆ ಜಿಮ್ ಕೋಚ್ ಜಿ. ಗೋಪಾಲ್ ತರಬೇತಿ ನೀಡಿದ್ದರು.

ದಾವಣಗೆರೆ ಕ್ಲಬ್ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ, ಉಪಾಧ್ಯಕ್ಷ ಎ.ಬಿ. ಚಂದ್ರಶೇಖರ್, ಗೌರವ ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟಿ, ಸಹ ಕಾರ್ಯದರ್ಶಿ ಎಸ್. ಉಳವಯ್ಯ, ಖಜಾಂಚಿ ಹೆಚ್.ಸಿ. ಲಿಂಗರಾಜ್ ವಾಲಿ, ನಿರ್ದೇಶಕರಾದ ಬೆಳ್ಳೂಡಿ ಸದಾನಂದ, ಹೆಚ್.ವಿ. ರುದ್ರೇಶ್, ಬಾದಾಮಿ ಮಲ್ಲಿಕಾರ್ಜುನ್, ಅಭಿಷೇಕ್ ಬೇತೂರು, ತಿಮ್ಮರಾಜ್ ಗುಪ್ತಾ, ಪ್ರಶಾಂತ್ ಗುಪ್ತಾ ಹಾಗೂ ಇತರರು ಥಾಮಸ್ ವಿಜಯ ಅವರನ್ನು ಅಭಿನಂದಿಸಿದ್ದಾರೆ.

## ಬ್ಯಾಂಕ್‌ನಲ್ಲಿ ಟೇಬಲ್ ಮೇಲಿಟ್ಟಿದ್ದ ಹಣ ಕಳ್ಳತನ !

ದಾವಣಗೆರೆ, ಡಿ.21- ವ್ಯಕ್ತಿಯೊಬ್ಬರು ಬ್ಯಾಂಕ್ ನಲ್ಲಿ 1 ಲಕ್ಷ ರೂ. ನಗದು ಹಣ ಕಳೆದುಕೊಂಡ ಬಗ್ಗೆ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಟ್ಟುವಳ್ಳಿ ಕೆಎಸ್‌ಆರ್‌ಟಿಸಿ ಪಕ್ಕದ ಖಾದಿ ಇಂಡಿಯಾ ಭಂಡಾರದ ಮ್ಯಾನೇಜರ್ ಶರಣ್ ರಾಜ್ ಹಣ ಕಳೆದಕೊಂಡಿದ್ದು, ಖಾದಿ ಭಂಡಾರದ ಉಸ್ತುವಾರಿ ತಿಪ್ಪೇಸ್ವಾಮಿ 1 ಲಕ್ಷ ನಗದು ಕೊಟ್ಟು ತಮ್ಮ ಅಕ್ಕ ನಾಗಮ್ಮ ಖಾದಿ ಗ್ರಾಮದ್ಯೋಗ ಕೈಗಾರಿಕಾ ಮಹಿಳಾ ಮಂಡಳಿ ಹೆಸರಿಗಿರುವ ಬರೋಡಾ ಬ್ಯಾಂಕಿಗೆ ಜಮಾ ಮಾಡಲು ಹಾಗೂ ಅವರ ಅಕ್ಕ ಜಯಮ್ಮ ಅವರನ್ನು ಕರೆದುಕೊಂಡು ಹೋಗಿ 15 ಸಾವಿರ ಹಣ ಬಿಡಿಸಿಕೊಂಡು ಬರುವಂತೆ ತಿಳಿಸಿದ್ದು, ಅದರಂತೆ ಇದೇ ಡಿ.20ರಂದು ಪಿಬಿ ರಸ್ತೆಯಲ್ಲಿರುವ ಬರೋಡ ಬ್ಯಾಂಕ್ ಗೆ ಹೋಗಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ತಾನು ತನ್ನ ಕೈಯಲ್ಲಿದ್ದ 1 ಲಕ್ಷ ರೂ. ಹಣವನ್ನು ಅಲ್ಲೆ ಟೇಬಲ್ ಮೇಲೆ ಬಿಟ್ಟು ಕ್ಯಾಷಿಯರ್ ಕೌಂಟರ್ ಗೆ ಹೋಗಿ ಬರುವುದರೊಳಗಾಗಿ ಆ ಹಣ ಕಳವಾಗಿರುವುದಾಗಿ ಶರಣ್ ರಾಜ್ ದೂರು ನೀಡಿದ್ದಾರೆ.

# ಎಂಇಎಸ್ ಪುಂಡರಿಗೆ ಉಗ್ರ ಶಿಕ್ಷೆಗೆ ಆಗ್ರಹಿಸಿ ಪಂಜಿನ ಮೆರವಣಿಗೆ

## ಹರಪನಹಳ್ಳಿಯಲ್ಲಿ ಸಂಘಟನೆಗಳಿಂದ ಪ್ರತಿಭಟನೆ



ಹರಪನಹಳ್ಳಿ, ಡಿ.21- ಬೆಳಗಾವಿಯಲ್ಲಿ ನಾಡಧ್ವಜವನ್ನು ಸುಟ್ಟು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನ ಗೊಳಿಸಿರುವ, ಎಂ.ಇ.ಎಸ್ ಸಂಘಟನೆಯ ಕಿಡಿಗೇಡಿಗಳಿಗೆ ಸರ್ಕಾರ ಕೂಡಲೇ ಉಗ್ರ ಶಿಕ್ಷೆ ನೀಡಬೇಕೆಂದು ಆಗ್ರಹಿಸಿ ವಿವಿಧ ಸಂಘಟನೆಗಳ ಮುಖಂಡರು ಪಟ್ಟಣದಲ್ಲಿ ಪಂಜಿನ ಮೆರವಣಿಗೆ ನಡೆಸಿ ಪ್ರತಿಭಟಿಸಿದರು.

ಮಂಗಳವಾರ ಸಂಜೆ ಪಟ್ಟಣದ ಕುರುಬಗೇರಿ ಬಳಿ ಇರುವ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ನೂರಾರು ಸಂಖ್ಯೆಯಲ್ಲಿ ರಾಯಣ್ಣನ ಅಭಿಮಾನಿಗಳು ಎಂ.ಇ.ಎಸ್ ಪುಂಡರ ವಿರುದ್ಧ ದಿಕ್ಕಾರ ಕೂಗುತ್ತಾ ಪಂಜಿನ ಮೆರವಣಿಗೆ ಮೂಲಕ ಐ.ಬಿವೃತ್ತದಲ್ಲಿಜಮಾಯಿಸಿಪ್ರತಿಭಟಿಸಿದರು.

ಈ ವೇಳೆ ರೈತ ಸಂಘದ ಅಧ್ಯಕ್ಷ ಎಚ್. ವೆಂಕಟೇಶ್ ಮಾತನಾಡಿ, ಕರ್ನಾಟಕದಲ್ಲೇ ಇದ್ದುಕೊಂಡು ಕನ್ನಡಿಗರ ವಿರುದ್ಧ ನಿಂತು ನಾಡ ದ್ರೋಹ ಕೆಲಸ ಮಾಡುತ್ತಿರುವ ಶಿವಸೇನೆ ಕಾರ್ಯಕರ್ತರು ಪದೇ ಪದೇ ಕನ್ನಡಿಗರನ್ನು ಕೆಣುಕುತ್ತಿರುವುದು ಖಂಡನೀಯ ಎಂದರು.

ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಕನ್ನಡ ಧ್ವಜವನ್ನು ಸುಟ್ಟು ಹಾಕಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನ ಪ್ರತಿಮೆಯನ್ನು ಭಗ್ನ ಗೊಳಿಸಿರುವ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಭಗ್ನ ಗೊಂಡ ಸಂಗೊಳ್ಳಿ ರಾಯಣ್ಣನ ನೂತನ ಪ್ರತಿಮೆಯನ್ನು ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ಬಿ.ಪರಶುರಾಮಪ್ಪ, ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಬಿ.ಗೋಣಿ ಬಸಪ್ಪ, ಕಲ್ಲಹಳ್ಳಿ ಗೋಣೆಪ್ಪ ಮಾತನಾಡಿ, ಬೆಳಗಾವಿ ಮತ್ತು ಮಹಾರಾಷ್ಟ್ರದ ಜನತೆ ಸ್ನೇಹ, ಪ್ರೀತಿ, ಸೌಹಾರ್ದತೆಯಿಂದ ಬದುಕುತ್ತಿದ್ದಾರೆ, ಕೆಲ ಮೂರ್ಖರಿಂದ ಜನತೆಯ ನೆಮ್ಮದಿ ಹಾಳಾಗುತ್ತಿದೆ. ಯಾವತ್ತೂ ಕರ್ನಾಟಕದ ಬೆಳಗಾವಿ ವಿಭಾಜ್ಯ ಅಂಗ, ಕೊಲ್ಲಾಪುರ ಮತ್ತು ಬೆಳಗಾವಿಯಲ್ಲಿ ನಡೆದ ಘಟನೆಗೆ ಸಂಬಂಧಪಟ್ಟ ಅಪರಾಧಿಗಳಿಗೆ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸಿದರು

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರುಗಳಾದ ಭರತೇಶ, ಉದ್ದಾರ ಗಣೇಶ, ಮುಖಂಡ ಪ್ರಕಾಶ್, ಹನುಮಂತಪ್ಪ, ಬಳಿಗಾನೂರು ಪರಶುರಾಮ, ಭಂಗಿ ಕೆಂಚಪ್ಪ, ಬಾಲಪ್ಪ ಟಿ.ಮಲ್ಲಿಕಾರ್ಜುನ, ಹರ್ಷ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಮದುವೆ ವಯಸ್ಸು ಹೆಚ್ಚಿಸುವ ಮಸೂದೆ ಲೋಕಸಭೆಯಲ್ಲಿ ಮಂಡನೆ

ನವದೆಹಲಿ, ಡಿ. 21 – ಮಹಿಳೆಯರ ಮದುವೆ ವಯಸ್ಸನ್ನು 21 ವರ್ಷಕ್ಕೆ ಹೆಚ್ಚಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಪ್ರತಿಪಕ್ಷಗಳ ವಿರೋ ಧದ ನಂತರ ಮಸೂದೆಯನ್ನು ಸಂಸದೀಯ ಸಮಿತಿ ಪರಿಶೀಲನೆಗೆ ವಹಿಸಲಾಗಿದೆ.

ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಮಸೂದೆ, 2021 ಅನ್ನು ಮಂಡಿಸಿದ್ದಾರೆ. ಆ ಮೂಲಕ ಮಹಿಳೆಯರ ಮದುವೆಯ ವಯಸ್ಸನ್ನು ಪುರುಷರಿಗೆ ಸಮನಾಗಿ 21 ವರ್ಷಕ್ಕೆ ಹೆಚ್ಚಿಸಲಾಗುವುದು.

ಯಾವುದೇ ಸಂಪ್ರದಾಯ, ಪದ್ಧತಿ ಹಾಗೂ ಪಾಲನೆ ಇದ್ದರೂ ಸಹ ಮದುವೆಯ ವಯಸ್ಸು ಒಂದೇ ಆಗಿರಲಿದೆ ಎಂದು ಇರಾನಿ ಹೇಳಿದ್ದಾರೆ. ಈ ಮಸೂದೆಯ ಮೂಲಕ ಹಲವಾರು ಧರ್ಮಗಳಿಗೆ ಸಂಬಂಧಿಸಿದ ಕಾನೂನುಗಳಿಗೆ ತಿದ್ದುಪಡಿ ತರಲಾಗುವುದು. ವಿಸ್ತೃತ ಪರಿಶೀಲನೆಗಾಗಿ ಮಸೂದೆಯನ್ನು ಸಂಸದೀಯ ಸಮಿತಿಗೆ ವಹಿಸಲಾಗಿದೆ.

## ಇಂಡಿಯನ್ ಸೊಸೈಟಿ ಆಫ್ ಅನಸ್ತೇಷಿಯಾಲಜಿಸ್ಟ್ ದಾವಣಗೆರೆ ವಿಭಾಗದ ಅಧ್ಯಕ್ಷರಾಗಿ ಡಾ. ಅರುಣ್



ದಾವಣಗೆರೆ, ಡಿ.21- ಇಂಡಿಯನ್ ಸೊಸೈಟಿ ಆಫ್ ಅನಸ್ತೇಷಿಯಾಲಜಿಸ್ಟ್‌ನ ದಾವಣಗೆರೆ ವಿಭಾಗದ ಅಧ್ಯಕ್ಷರಾಗಿ ಡಾ. ಅರುಣ್‌ಕುಮಾರ್ ಉಜ್ಜಪ್ಪ, ಕಾರ್ಯದರ್ಶಿಯಾಗಿ ಡಾ. ಎಸ್.ಎಂ. ಸಾಗರ್ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಡಾ. ಬಿ.ಆರ್. ಉಮಾ, ಸಹಕಾರ್ಯದರ್ಶಿಯಾಗಿ ಡಾ. ಅನಿತಾ ಅಂಜಿ, ಖಜಾಂಚಿಯಾಗಿ ಡಾ. ಗುಡೆ ಮಾರುತಿ ಪ್ರಸಾದ್ ಆಯ್ಕೆಯಾಗಿದ್ದಾರೆ.

ಸದಸ್ಯರುಗಳಾಗಿ ಡಿ.ಬಿ. ಪ್ರಕಾಶ್, ಡಾ. ರವಿಶಂಕರ್, ಡಾ. ಜಿ.ಕೆ ವಿಶ್ವಾಸ್, ಡಾ. ಅನಸೂಯ ಹೆಗಡೆ, ಡಾ. ಎಂ.ಎನ್. ಪೂಜಾ, ಡಾ. ಅಬ್ದುಲ್ ಶಬ್ಬೀರ್, ಡಾ. ಬಿ.ಜಿ. ಪ್ರಭು ಅವರುಗಳು ಆಯ್ಕೆಯಾಗಿದ್ದಾರೆ.

## ಎಂಇಎಸ್ ಸಂಘಟನೆ ನಿಷೇಧಕ್ಕೆ ಆಗ್ರಹಿಸಿ ಮರಾಠ ಸಮಾಜದಿಂದ ಇಂದು ಪ್ರತಿಭಟನೆ

ದಾವಣಗೆರೆ,ಡಿ.21- ಎಂಇಎಸ್ ಪುಂಡರು ಕನ್ನಡ ಧ್ವಜಕ್ಕೆ ಬೆಂಕಿ ಇಟ್ಟ ಪ್ರಕರಣ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ವಿರೂಪಗೊಳಿಸಿದ ಹಾಗೂ ಛತ್ರಪತಿ ಶಿವಾಜಿ ಪ್ರತಿಮೆಗೆ ಮಸಿ ಬಳಿದ ಪ್ರಕರಣಗಳನ್ನು ಖಂಡಿಸಿ, ಎಂಇಎಸ್ ಸಂಘಟನೆಯನ್ನು ನಿಷೇಧಿಸುವಂತೆ ಆಗ್ರಹಿಸಿ, ಇಂದು ಬೆಳಿಗ್ಗೆ 11 ಗಂಟೆಗೆ ನಗರದಲ್ಲಿ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸುವುದಾಗಿ ಮರಾಠ ಸಮಾಜದ ಮುಖಂಡ ಯಶವಂತ ರಾವ್ ಜಾಧವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆ, ದುರ್ಗಾಂಬಿಕ ದೇವಸ್ಥಾನದ ಬಳಿ ಇರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ, ಕಾಯಿಪೇಟೆ ಶ್ರೀ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸುವುದಾಗಿ ಅವರು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಎಂಇಎಸ್ ಪುಂಡಾಟಿಕೆ ಹೆಚ್ಚಾಗುತ್ತಿದ್ದು, ದೇಶದ ಏಕತೆಗೆ ಕಾಣದ ಕೈಗಳು ಕೆಲಸ ಮಾಡುತ್ತಿವೆ. ನಾಡಿನ ಮಹಾನ್ ಪುರುಷರ ಪ್ರತಿಮೆಗೆ ಮಸಿ ಬಳಿಯುವ, ಭಗ್ನಗೊಳಿಸುವ ಕೃತ್ಯವನ್ನು ಮಾಡುವುದು ಸರಿಯಲ್ಲ. ಕೂಡಲೇ ಎಂಇಎಸ್ ಸಂಘಟನೆಯನ್ನು ನಿಷೇಧಿಸುವಂತೆ ಯಶವಂತರಾವ್ ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕದಲ್ಲಿ ಸುಮಾರು 45 ಲಕ್ಷ ಜನಸಂಖ್ಯೆಯಿರುವ ಮರಾಠರು ಸೌಹಾರ್ದಯುತ ಜೀವನ ನಡೆಸುತ್ತಿದ್ದಾರೆ. ಕೆಲವೇ ಕೆಲವು ದುಷ್ಕರ್ಮಿಗಳು ಶಾಂತಿ ಕದಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಮರಾಠ ಸಮಾಜದ ಮುಖಂಡರುಗಳಾದ ಮಾಲತೇಶರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಗೋಪಾಲರಾವ್ ಮಾನೆ, ಮರಿಯೋಜಿ ರಾವ್, ಪರಶುರಾಮ್, ಗೌರಮ್ಮ, ಮಂಜುಳಾ, ಚೇತನಾ, ಪದ್ಮಜ, ರಾಕೇಶ್ ಭಜರಂಗಿ, ಯಲ್ಲಪ್ಪ ಧಮಾಳೆ, ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಸಂಭ್ರಮದ ಹಳೇಪೇಟೆ ವೀರಭದ್ರಸ್ವಾಮಿ ಕಾರ್ತಿಕೋತ್ಸವ



ದಾವಣಗೆರೆ, ಡಿ.21- ನಗರದ ಹಳೇಪೇಟೆ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕೋತ್ಸವ ಮಂಗಳವಾರ ಸಂಜೆ ವಿಜೃಂಭಣೆಯಿಂದ ದೀಪೋತ್ಸವ ಜರುಗಿತು. ಕಾರ್ತಿಕ ಪ್ರಯುಕ್ತ ಸ್ವಾಮಿಗೆ ವಿಶೇಷವಾಗಿ ಹೂವಿನ ಅಲಂಕಾರ ಮಾಡಲಾಗಿತ್ತು.

## ನಗರದಲ್ಲಿ ಇಂದು ಎಪಿಎಂಸಿ ದಲ್ಲಾಲರ ಸಂಘದ ಸಭೆ

ಎಪಿಎಂಸಿ ದಲ್ಲಾಲರ ಸಂಘದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ದಲ್ಲಾಲರ ಸಂಘದ ಸಭೆ ಕರೆಯಲಾಗಿದೆ ಎಂದು ಸಂಘದ ಅಧ್ಯಕ್ಷ ಕಂಸಾಗರದ ಪಂಚಾಕ್ಷರಪ್ಪ ಹಾಗೂ ಕಾರ್ಯದರ್ಶಿ ಹೆಚ್. ದಯಾನಂದ್ ತಿಳಿಸಿದ್ದಾರೆ.

## ವಿದ್ಯಾನಗರದಲ್ಲಿ ಶುದ್ಧ ನೀರಿನ ಘಟಕ ಉದ್ಘಾಟನೆ



ದಾವಣಗೆರೆ, ಡಿ.21- ವಿದ್ಯಾನಗರದಲ್ಲಿ ಶುದ್ಧ ನೀರಿನ ಘಟಕ ಹಾಗೂ ಶಿವ - ಪಾರ್ವತಿ ದೇವಸ್ಥಾನದ ಮುಂದೆ ಚರಂಡಿ ನಿರ್ಮಾಣಕ್ಕೆ ಶಂಕು ಸ್ಥಾಪನೆಯನ್ನು ಹಿರಿಯ ಶಾಸಕ ಎಸ್.ಎ.ರವೀಂದ್ರನಾಥ್ ನೆರವೇರಿಸಿದರು.

ಶಾಸಕರ ಅನುದಾನದಲ್ಲಿ ನಿರ್ಮಿತಿ ಕೇಂದ್ರದ ವತಿಯಿಂದ ಶುದ್ಧ ನೀರಿನ ಘಟಕ ಉದ್ಘಾಟನೆ ಹಾಗೂ ಚರಂಡಿ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಲೆಕ್ಕ ಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರೂ, ಈ ವಾರ್ಡಿನ ಸದಸ್ಯರೂ ಆದ ಶ್ರೀಮತಿ ಗೀತಾ ದಿಳ್ಯಪ್ಪ, ಮಹಾನಗರ ಪಾಲಿಕೆ ಸದಸ್ಯರುಗಳಾದ ಗೌರಮ್ಮ ಗಿರೀಶ್, ಕೆ.ಎಂ. ವೀರೇಶ್, ಪ್ರಸನ್ನ ಕುಮಾರ್, ಮಂಜನಾಯ್ಕ, ಸೌಮ್ಯ ನರೇಂದ್ರ ಕುಮಾರ್ ಹಾಗೂ ಮಾಜಿ ಮಹಾಪೌರ ವಸಂತ್ ಕುಮಾರ್, ಜಿ.ಪಂ. ಮಾಜಿ ಅಧ್ಯಕ್ಷರಾದ ಸಹನಾ ರವಿ, ಮಾಜಿ ಉಪ ಮಹಾಪೌರರಾದ ಬೆಳವನೂರು ನಾಗರಾಜಪ್ಪ, ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್.ಮಂಜು ನಾಥ್ ಕುರ್ಕಿ, ಬಾಡ ಆನಂದರಾಜ್, ಶಿವಕುಮಾರ್ ಕಡ್ಲೇಬಾಳು, ಶಾಂತದೊರೆ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಆನ್‌ಲೈನ್‌ನಲ್ಲಿ ಉಡುಪು ಖರೀದಿಸುವ ಪ್ರಯತ್ನದಲ್ಲಿ ಹಣ ಕಳೆದುಕೊಂಡ ವಿದ್ಯಾರ್ಥಿನಿ

ದಾವಣಗೆರೆ, ಡಿ.21- ಆನ್ ಲೈನ್ ಮುಖೇನ ಉಡುಪು ಖರೀದಿಸಲು ಹೋಗಿ ಖಾತೆಯಲ್ಲಿದ್ದ 49,500 ರೂ. ಹಣವನ್ನು ವಿದ್ಯಾರ್ಥಿನಿಯೋರ್ವರು ಕಳೆದುಕೊಂಡಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿದ್ಯಾನಗರದ ಯುಬಿಡಿಟಿ ಲೇಡಿಸ್ ಹಾಸ್ಟೆಲ್ ನ ವಿದ್ಯಾರ್ಥಿನಿ ಡಿ.ಬಿ. ಪ್ರಿಯಾಂಕ ರಾಜ್ ಮೋಸ ಹೋದವರು. ಕಳೆದ ನ.22, 2021ರಂದು ಡ್ರೆಸ್ ಅನ್ನು ಆನ್ ಲೈನ್ ಮೂಲಕ ಖರೀದಿಸಲು ನೋರ್ ಫ್ಯಾಷನ್ ಎಂಬ ವೆಬ್ ಸೈಟ್ ಮೂಲಕ ಬುಕ್ ಮಾಡಿದ್ದು, ಆಗ 199 ರೂ. ಹಣ ಗೂಗಲ್ ಪೇ ಮೂಲಕ ಪ್ರಿಯಾಂಕ ಖಾತೆಯಿಂದ ಕಡಿತವಾಗಿದೆ.

ಹಲವು ದಿನಗಳಾದರೂ ಬುಕ್ ಮಾಡಿದ ಡ್ರೆಸ್ ಬಾರದೇ ಇದ್ದಾಗ ಇದೇ ದಿನಾಂಕ 19ರಂದು ಗೂಗಲ್ ನಲ್ಲಿದ್ದ ನೋರ್ ಫ್ಯಾಷನ್ ಕಸ್ಟಮರ್ ಕೇರ್ ಹೆಸರಿನಲ್ಲಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿದಾಗ, ಅಪರಿಚಿತರು ಮಾತನಾಡಿ ನಾವು ಕಳುಹಿಸುವ ಸಂದೇಶವನ್ನು ಬೇರೆ ಮೊಬೈಲ್ ಸಂಖ್ಯೆಗೆ ಫಾರ್ ವರ್ಡ್ ಮಾಡುವಂತೆ ತಿಳಿಸಿದ್ದು, ಇದನ್ನೇ ನಂಬಿ ಆ ಸಂದೇಶವನ್ನು ಫಾರ್ ವರ್ಡ್ ಮಾಡಿದ ತಕ್ಷಣವೇ ಖಾತೆಯಿಂದ ಹಂತ ಹಂತವಾಗಿ ಹಣ ವರ್ಗಾಯಿಸಿಕೊಂಡು ವಂಚಿಸಿರುವುದಾಗಿ ಪ್ರಿಯಾಂಕ ದೂರು ನೀಡಿದ್ದಾರೆ.

## 'ದೇಶ ವಿರೋಧಿ' ಎಂಬುದಕ್ಕೆ ವ್ಯಾಖ್ಯಾನವಿಲ್ಲ

ನವದೆಹಲಿ, ಡಿ. 21 - 'ದೇಶ - ವಿರೋಧಿ' ಎಂಬ ಪದಕ್ಕೆ ಶಾಸನಗಳಲ್ಲಿ ಯಾವುದೇ ವ್ಯಾಖ್ಯಾನವಿಲ್ಲ. 1976ರ ತುರ್ತು ಪರಿಸ್ಥಿತಿಯಲ್ಲಿ ಮೊದಲ ಬಾರಿಗೆ ಸಂವಿಧಾನದಲ್ಲಿ ಈ ಪದ ಸೇರ್ಪಡೆ ಮಾಡಲಾಗಿದೆ. ಮರು ವರ್ಷ ಈ ಪದವನ್ನು ವಾಪಸ್ ಪಡೆಯಲಾಗಿತ್ತು ಎಂದು ಕೇಂದ್ರ ಸಚಿವ ನಿತ್ಯಾನಂದ ರಾಯ್ ಲೋಕಸಭೆಗೆ ತಿಳಿಸಿದ್ದಾರೆ. ಯಾವುದೇ ಶಾಸನ ಇಲ್ಲವೇ ನಿಯಮ, ಇಲ್ಲವೇ ಕಾನೂನಿನಲ್ಲಿ ದೇಶ ವಿರೋಧಿ ಎಂಬ ಪದಕ್ಕೆ ಅರ್ಥವಿದೆಯೇ ಎಂದು ಹೈದರಾಬಾದ್ ಸಂಸದ ಅಸಾದುದ್ದೀನ್ ಒವೈಸಿ ಪ್ರಶ್ನಿಸಿದ್ದಕ್ಕೆ ರಾಯ್ ಉತ್ತರಿಸುತ್ತಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್, ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಶ್ರೀನಿವಾಸ್ ನಗರ, ಭದ್ರಾ ಕಾಲೋನಿ, ಹದಡಿ ರೋಡ್, ಇನ್‌ಕಂ ಟ್ಯಾಕ್ಸ್ ಬಿಲ್ಡಿಂಗ್, ಡಿಆರ್‌ಆರ್ ಹಾಸ್ಟೆಲ್, ಅನುಭವ ಮಂಟಪ ಸ್ಕೂಲ್ ಹಾಗೂ ಸುತ್ತಮುತ್ತಲಿನಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

ಶಾಮನೂರು, ಜೆ.ಎಚ್. ಪಟೇಲ್ ನಗರ, ಡಾಲರ್ಸ್ ಕಾಲೋನಿ, ಶಿವ ಪಾರ್ವತಿ ಲೇಔಟ್ ಮತ್ತು ಸಂಭ್ರಮ ಹೋಟೆಲ್ ಹಿಂಭಾಗ, ಹೊಸ ಕುಂದುವಾಡ, ಹಳೇಕುಂದವಾಡ, ಕೆ.ಎಚ್.ಬಿ. ಕಾಲೋನಿ, ಜರೀಕಟ್ಟೆ, ಮುದಹದಡಿ ಮತ್ತು ರಶ್ಮಿ ಸ್ಕೂಲ್ ಸುತ್ತಮುತ್ತನಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.

## ಮಾರ್ಗಸೂಚಿ ಬೆಲೆ ; ಆಕ್ಷೇಪಣೆ ಆಹ್ವಾನ

ಜಗಳೂರು

ಜಗಳೂರು, ಡಿ.21 - ಉಪನೋಂದಣಿ ಕಛೇರಿಯ ತಾಲ್ಲೂಕು ವ್ಯಾಪ್ತಿಯ ಸ್ಥಿರ ಸ್ವತ್ತುಗಳ ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಆಕ್ಷೇಪಣೆ ಗಳೇನಾದರೂ ಇದ್ದಲ್ಲಿ 15 ದಿನಗಳ ಒಳಗಾಗಿ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಉಪನೋಂದಣಾಧಿಕಾರಿಗಳು ಜಗಳೂರು ಇವರಲ್ಲಿ ನೇರವಾಗಿ ಸಲ್ಲಿಸಬಹುದು.

## 2 ವರ್ಷದ ಬಿ.ಇಡಿಗೆ ಮೂಲ ದಾಖಲೆ ಪರಿಶೀಲನೆಗೆ ಪುನರ್ ಅವಕಾಶ

ದಾವಣಗೆರೆ, ಡಿ.21- ಪ್ರಸಕ್ತ ಸಾಲಿನ 2 ವರ್ಷದ ಬಿ.ಇಡಿ ದಾಖಲಾತಿಗೆ ಸಂಬಂಧಿಸಿದಂತೆ ಇದೇ ದಿನಾಂಕ 2 ರಿಂದ 14 ರವರೆಗೆ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ತಮ್ಮ ಮೂಲ ದಾಖಲೆಗಳ ಪರಿಶೀಲನೆಗೆ ಕೇಂದ್ರೀಕೃತ ದಾಖಲಾತಿ ಘಟಕ ಅವಕಾಶ ಕಲ್ಪಿಸಿದೆ.

ಇಲಾಖಾ ವೆಬ್‌ಸೈಟ್‌ನಲ್ಲಿ ವೇಳಾಪಟ್ಟಿ ಪ್ರಕಟಿಸಲಾಗುವುದು. ಆಯಾ ದಿನದಂದು ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ ಇಲಾಖಾ ವೆಬ್‌ಸೈಟ್ www.schooleducation.kar.nic.in ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

## ನಗರದಲ್ಲಿ ಇಂದು ವಿಠ್ಠಲ ರುಕ್ಮಿಣಿ ಕಾರ್ತಿಕ

ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ಹರಿ ಮಂದಿರದಲ್ಲಿ ಇಂದು ಕಡೇ ಕಾರ್ತಿಕ ಜರುಗಲಿದೆ.

ಇಂದು ಸಂಜೆ 6 ಗಂಟೆಯಿಂದ 7.30 ರವರೆಗೆ ಹರಿಭಕ್ತ ಪಾರಾಯಣದಿಂದ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ನಾಮದೇವ ಸಿಂಪಿ ಸಮಾಜದ ಯುವ ಮಂಡಳಿ ಕಾರ್ಯದರ್ಶಿ ಮನೋಹರ್ ವಿ.ಬೊಂಗಾಳೆ ತಿಳಿಸಿದ್ದಾರೆ.




॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಚಂದ್ರಗುತ್ತೆಮ್ಮ ದೇವಿ ಪ್ರಸನ್ನ ॥

ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ



ದಾವಣಗೆರೆ ತಾ॥ ಜಿ॥ ಹೊಸ ಕುಂದುವಾಡ ಗ್ರಾಮದ ವಾಸಿ
ಶ್ರೀ ಚನ್ನಬಸಪ್ಪ ಮತ್ತು ಶ್ರೀ ಕರಿಗಾರ್ ಮಂಜು
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 14.12.2021ನೇ ಮಂಗಳವಾರದಂದು ರಾತ್ರಿ 2.30ಕ್ಕೆ
ನಮ್ಮ ಪೂಜ್ಯ ತಾಯಿಯವರಾದ
ದಿ. ಶ್ರೀಮತಿ ಕರಿಗಾರ್ ಬಂಧಕ್ಕರ್ ಈರಮ್ಮ
(ದಿ॥ ಶ್ರೀ ಕರಿಗಾರ್ ಬಂಧಕ್ಕರ್ ಹನುಮಂತಪ್ಪ ಇವರ ಧರ್ಮಪತ್ನಿ)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ 22.12.2021ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ॥ ಹೊಸ ಕುಂದುವಾಡ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀ ಚನ್ನಬಸಪ್ಪ, ಶ್ರೀ ಕರಿಗಾರ್ ಮಂಜು ಮತ್ತು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು, ಬಂಧು-ಮಿತ್ರರು. ಮೊ: 98804 30147, 90608 66685

ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಶಿವಾಲಿ ಟಾಕೀಸ್ ಎದುರು, ದಾವಣಗೆರೆ-577 006. ಫೋ. : 08192235091, ಮೊ. : 9740680677

23ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ದಿನಾಂಕ: 22.12.2021ನೇ ಬುಧವಾರ
ಸ್ಥಳ : ದಾನ ರತ್ನಾಕರ ಚಿರಡೋಣಿ ಶ್ರೀಮತಿ ಕಾವೇರಮ್ಮ, ಶ್ರೀ ಸತ್ಯನಾರಾಯಣ ಶ್ರೇಷ್ಠಿ ಸಭಾ ಭವನ
ಇಡಬ್ಲ್ಯೂಎಸ್ ಕಾಲೋನಿ, 1ನೇ ಮೇನ್, 4ನೇ ಕ್ರಾಸ್, ಅಯ್ಯಪ್ಪಸ್ವಾಮಿ ದೇವಸ್ಥಾನದ ಎದುರು
ಶಿವಾಲಿ ರಸ್ತೆ, ಡಿ. ದೇವರಾಜ ಅರಸು ಬಡಾವಣೆ, ದಾವಣಗೆರೆ-06.

ವಿಶೇಷ ಸೂಚನೆ :
* ವಾರ್ಷಿಕ ಮಹಾಸಭೆಗೆ ಬರುವಾಗ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ವರದಿಯನ್ನು ತರಬೇಕಾಗಿ ಕೋರಿದೆ.
* ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು. ಸ್ಯಾನಿಟೈಸರ್ ಬಳಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ನೋಟೀಸ್‌ಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿಸಲಾಗಿದೆ.

ಶ್ರೀ ವಿಜಯಕುಮಾರ್ ಬಿ. ಅಧ್ಯಕ್ಷರು
ಶ್ರೀ ನಿರಂಜನ ಬಾಬು ಟಿ.ಹೆಚ್. ಉಪಾಧ್ಯಕ್ಷರು
ಕಾರ್ಯಕಾರಿ ಮಂಡಳಿ ಅಪ್ಪಣೆಯ ಮೇರೆಗೆ (ಎಸ್. ರಮೇಶ್) ಕಾರ್ಯದರ್ಶಿ

ನಿರ್ದೇಶಕರು :
♦ ಹೇಮಂತಕುಮಾರ್ ಕೆ.♦ ಪ್ರಕಾಶ್ ಕೆ.ಜಿ. ♦ ಶ್ರೀಮತಿ ಜೀವಿಕಾ ಈ.ವೈ.
♦ ಶ್ರೀಮತಿ ಶಾಂತಮ್ಮ ಟಿ. ಸವದತ್ತಿ ♦ ಭೀಮಪ್ಪ ಎ.ಡಿ. ♦ ಹಿರೇಮಠ ಎಸ್.ಎಂ.,
♦ ಜಯರಾಮ್ ಕೆ.ಜಿ. ♦ ಷಣ್ಮುಖಪ್ಪ ♦ ಲೋಹಿತ್ ಈ.ವೈ.

ವಿಶೇಷ ಆಹ್ವಾನಿತರು: ♦ ಆನಂದ ಸಿ.ಬಿ. ♦ ಮಾಲತೇಶ್ ಜಿ.ಆರ್.

ಸಿಬ್ಬಂದಿ ವರ್ಗ:
♦ ಕು. ಎನ್.ಬಿ. ಶಶಿಕಲಾ, ಸಹಾಯಕರು ♦ ಶ್ರೀಮತಿ ಪಿ. ಮಂಜುಳ, ಅಟೆಂಡರ್ ♦ ಶ್ರೀಮತಿ ಎ. ಭವಾನಿ, ಸಹಾಯಕರು
♦ ಜೆ.ಸಿ. ರಮೇಶ್ ♦ ಶಿವಕುಮಾರ್ ಟಿ. ♦ ವರುಣ್ ಕುಮಾರ್ ಕಂಬಳಿ, ಪಿಗ್ಮಿ ಸಂಗ್ರಾಹಕರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte